ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

# ತಪೋವಾಣಿ

ಸಂಪುಟ 14 ಸಂಚಿಕೆ 12 | ಡಿಸೆಂಬರ್ 2017 | ರೂ.25

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

**ಅನು: ಚಂಪ**

(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ಆಗಸ್ಟ್ 1997ರ ಸಂಚಿಕೆ)

ಅಮರರವರು ತಮ್ಮ ಸಮುದಾಯಕ್ಕೆ ವಿಶ್ವಮೈತ್ರಿ ಎಂದು ಹೆಸರಿಟ್ಟಿದ್ದರು, ವಿಶ್ವಮೈತ್ರಿ ಎಂದರೆ ಅಕ್ಷರಶಃ ಸಾರ್ವತ್ರಿಕ ಸ್ನೇಹ. ನಂತರ ನಾವು ಅರ್ಥಮಾಡಿಕೊಂಡೆವು ವಿಶ್ವ ಎಂದರೆ ಸೃಷ್ಟಿ-ಆಗಲೇ ಅಭಿವ್ಯಕ್ತವಾಗಿರುವ ಸೃಷ್ಟಿ ಹಾಗೂ ಮುಂದೆ ಅಭಿವ್ಯಕ್ತವಾಗಲಿರುವ ಸೃಷ್ಟಿ. ಈ ಕಲ್ಪನೆಯೇ ನಮ್ಮನ್ನು ಭಾವಪರವಶರನ್ನಾಗಿಸುತ್ತದೆ. ಮಹಾತ್ಮರ ಕಲ್ಪನೆಯೇ ಅಂತಹುದು, ಅದನ್ನು ಹೊರಗೆಡಹಿದಾಗ ಅರ್ಥಮಾಡಿಕೊಳ್ಳಲಾಗದಷ್ಟು ಅದು ಅಸಾಧಾರಣವಾಗಿರುತ್ತದೆ, ನಮ್ಮ ಅಂತರಂಗದ ಬೆಳವಣಿಗೆಯ ಮೌನ ಪಯಣದಲ್ಲಿ ನಾವು ಮುಂದುವರಿಯುತ್ತ ಹೋದಂತೆ ನಮ್ಮ ಹೊಸ ಅರಿವಿನ ಕ್ಷಿತಿಜದಲ್ಲಿ ಅದರ ಅರ್ಥ ಮೂಡಲಾರಂಭಿಸುತ್ತದೆ. ಹೀಗೆ ಮಹಾತ್ಮರುಗಳ ಬೋಧನೆಗಳು ಜೀವಂತವಾಗಿರುತ್ತವೆ. ಒಬ್ಬ ಮಹಾತ್ಮ ಎಂದಿಗೂ ಮರೆಯಾಗುವುದಿಲ್ಲ; ಅವರ ಶರೀರ ಮಾತ್ರ ಅಳಿಯುತ್ತದೆ. ಸಾಧನೆಯಲ್ಲಿ ವಿಶ್ವಮೈತ್ರಿಯೇ ಸರ್ವೋತ್ಕೃಷ್ಟವಾದುದು. ನಮ್ಮ ಅರಿವನ್ನು ಹಾಗೂ ಪ್ರೀತಿಯನ್ನು, ಅಭಿವ್ಯಕ್ತವಾದ ಮತ್ತು ಇನ್ನೂ ಅಭಿವ್ಯಕ್ತವಾಗಲಿರುವ ಸೃಷ್ಟಿಗೆ ಹರಡಲು ಸಾಧ್ಯವಾದಾಗ, ನಾವು ನಮ್ಮೆಲ್ಲ ಅಹಂಕಾರ, ನಕಾರಾತ್ಮಕತೆ ಮತ್ತು ಅಜ್ಞಾನವನ್ನು ಮೀರಿಹೋದಂತೆ, ಸಮಾಧಿಯನ್ನೇ ಅನುಭವಿಸಿದಂತೆ; ಹಾಗೂ ನಮ್ಮೆಲ್ಲ ಯೋಚನೆಗಳನ್ನು, ಭಾವನೆಗಳನ್ನು ಮತ್ತು ಜೀವಿತವನ್ನು ಸಕಾರಾತ್ಮಕಗೊಳಿಸಿಕೊಂಡಂತೆ.

ಒಬ್ಬ ವ್ಯಕ್ತಿಯು ಯಾವಾಗಲೂ ಒಂದು ಪ್ರಶ್ನೆಯನ್ನು ಕೇಳುತ್ತಿರುತ್ತಾರೆ – "ನಾನೇಕೆ ಈ ಜಗತ್ತನ್ನು ಸಹಿಸಿಕೊಂಡಿರಬೇಕು?" ನನ್ನ ಉತ್ತರಗಳನ್ನು ಮತ್ತು ದೀರ್ಘ ವಿವರಣೆಗಳನ್ನು ಸಹಜವಾಗಿಯೇ ಒಪ್ಪಿಕೊಳ್ಳಲಿಲ್ಲ. ನಮ್ಮ ವೈಯಕ್ತಿಕ ಸಾಫಲ್ಯಗಳನ್ನು ಮತ್ತು ಸತ್ಯಗಳನ್ನು ಇತರರಿಗೆ ಹೇಳಿ ಮನವರಿಕೆ ಮಾಡಿಸುವುದು ಕಷ್ಟ. ನಾನು ಪ್ರಯತ್ನ ಮಾಡುವುದೂ ಇಲ್ಲ, ಅದು ಬೇಕಾಗೂ ಇಲ್ಲ.

ಶಾಂತಿ ಮತ್ತು ಪ್ರೀತಿಯನ್ನು ಅನುಭವಿಸಲು, ಪ್ರಜ್ಞೆಯನ್ನು ಬೆಳೆಸಿಕೊಳ್ಳಲು ಮತ್ತು ಸಮಾಧಿಯನ್ನು ಅನುಭವಿಸಲು ಇಂತಹ ವಿಷಯಗಳನ್ನು ಮೀರಿಹೋಗಬೇಕು. ಇದನ್ನು ನಾನು ನೋವುಗಳು, ನಂಬಿಕೆದ್ರೋಹ, ವಿಭಿನ್ನ ವೈಯಕ್ತಿಕ ದೃಷ್ಟಿಕೋನಗಳ ಸಮಸ್ಯೆಗಳು ಇನ್ನೂ ಮುಂತಾದ ಅನುಭವಗಳಿಂದ ಅರ್ಥಮಾಡಿಕೊಂಡಿದ್ದೇನೆ. ಇವು ನಮಗೆ ಜೀವನದ ಮೌಲ್ಯಗಳನ್ನು ತಿಳಿಸುತ್ತವೆ. ಮಾನವ ಮಟ್ಟದ ಕ್ಷುಲ್ಲಕ ವಿಷಯಗಳಿಂದ ನಮಗೆ ಮೇಲಕ್ಕೇರಲು ಸಾಧ್ಯವಾಗದಿದ್ದರೆ, ಸಹಜವಾಗಿಯೇ ನಮಗೆ ಉನ್ನತಮಟ್ಟಕ್ಕೇರಲು ಸಾಧ್ಯವಾಗುವುದಿಲ್ಲ. ಸಮಸ್ಯೆಗಳು ಮತ್ತು ನೋವುಗಳೇ ನಮ್ಮ ಶಿಕ್ಷಕರು. ಅವಿರುವುದೇ ಅದಕ್ಕಾಗಿ! ನಾವು ಕಲಿಯಬೇಕಾದ ಪಾಠಗಳನ್ನು ಕಲಿತು ಮುಂದಕ್ಕೆ ಹೋದರೆ, ಅವು ಮರೆಯಾಗುತ್ತವೆ.

ನಾವು ಈ ಭೂಲೋಕದಲ್ಲಿರುವವರೆಗೆ ನಮಗೆ ಒಂದಲ್ಲಾ ಒಂದು ಸಮಸ್ಯೆಗಳು ಎದುರಾಗುತ್ತಲೇ ಇರುತ್ತವೆ. ಎಲ್ಲ ಸಮಸ್ಯೆಗಳಿಗೂ ಪರಿಹಾರವಿರುತ್ತದೆ. ಪರಿಹಾರವನ್ನು ಸಾಮಾನ್ಯ ರೀತಿಯಲ್ಲಿ ಅಂದರೆ ಭೌತಿಕವಾಗಿ ಅಥವಾ ಆಧ್ಯಾತ್ಮಿಕ ರೀತಿಯಲ್ಲಿ ಕಂಡುಕೊಳ್ಳಬಹುದು. ಆಧ್ಯಾತ್ಮಿಕ ಪರಿಹಾರಗಳು ಶಾಶ್ವತ. ಭೌತಿಕ ಮಟ್ಟದ ಪರಿಹಾರಗಳು ಬೇರೆ ಸಮಸ್ಯೆಗಳನ್ನು ತಂದೊಡ್ಡಬಹುದು!

ನನ್ನ ಸುತ್ತಮುತ್ತಲಿನ ಜಗತ್ತು ಪರಿಪೂರ್ಣವಲ್ಲ, ನಾನೂ ಅಷ್ಟೇ. ಜಗತ್ತನ್ನು ಸರಿಪಡಿಸಲು ಪ್ರಯತ್ನಿಸುವ ಮೊದಲು ನನ್ನನ್ನು ನಾನು ಸರಿಪಡಿಸಿಕೊಳ್ಳುತ್ತೇನೆ! ಇದು ನನ್ನ ವಿಧಾನ. ನನ್ನ ಮಟ್ಟಿಗೆ ಇದು ಸರಿ.

ನನಗೆ ತುಂಬಾ ಹತ್ತಿರವಾದವರೊಬ್ಬರು ನನ್ನನ್ನು ಹತ್ತು ವರ್ಷಗಳ ನಂತರ ಭೇಟಿಯಾದರು. ಅದೇ ಸ್ನೇಹಪರತೆ, ಅದೇ ನಿಷ್ಕಪಟ ಮಂದಹಾಸ. ಹೊಸತನ ಮತ್ತು ಉತ್ಸಾಹದ ತಂಗಾಳಿಯು ನನಗೆ ಮತ್ತು ನನ್ನ ಕೆಲಸಕ್ಕೆ ಜೀವ ತುಂಬಿತು. ಬಂದವರು ಅಮರರವರಿಗೆ ತುಂಬ ಹತ್ತಿರದವರಾಗಿದ್ದರು, ಅವರ ಭೇಟಿಯು ಆಶೀರ್ವಾದದಂತಿತ್ತು. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ (080) 2846 5280, 99000 75280 (ಬೆಳಗ್ಗೆ 10ರಿಂದ ಸಂಜೆ 5)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ,
ಬನಶಂಕರಿ 2ನೇ ಹಂತ

### ಆನೇಕಲ್‌ನಲ್ಲಿ

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)
ಸಪ್ತರ್ಷಿ ಧ್ಯಾನ ಕೇಂದ್ರ, ರಾಜರಾಜೇಶ್ವರಿ ಬಡಾವಣೆ
**ಮಂಗಳವಾರ** (ಮಧ್ಯಾಹ್ನ 11.30 ರಿಂದ 12.30)
ಶ್ರೀ ಮಂಜುನಾಥ ಶಾಸ್ತ್ರಿಯವರ ಮನೆ,
ಗಾಂಧಿ ವೃತ್ತ

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು 'Manasa Light Age Foundation' ಹೆಸರಿನಲ್ಲಿ ಕಳುಹಿಸಬೇಕು. ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ತಪೋನಗರದಲ್ಲಿ ದೀಪಾವಳಿ ಮತ್ತು ನವರಾತ್ರಿಯನ್ನು ಆಚರಿಸಲಾಯಿತು

### ಸುದ್ದಿ-ಸೂಚನೆ

- ಗುರೂಜಿಯವರ ಮಹಾಸಮಾಧಿ ದಿನವನ್ನು 23-11-2017 ರಂದು ಆನೇಕಲ್‌ನ ನಮ್ಮ ಸಪ್ತರ್ಷಿ ಧ್ಯಾನಕೇಂದ್ರದಲ್ಲಿ ಮತ್ತು 26-11-2017 ರಂದು ತಪೋನಗರದಲ್ಲಿ ಆಚರಿಸಲಾಯಿತು.
- 2018ನೇ ಇಸವಿಯ ಡೆಸ್ಕ್ ಕ್ಯಾಲೆಂಡರ್‌ಅನ್ನು ದಿನಾಂಕ 26-11-2017 ರಂದು ತಪೋನಗರದಲ್ಲಿ ನಡೆದ ಗುರೂಜಿಯವರ ಮಹಾಸಮಾಧಿ ದಿನದ ಕಾರ್ಯಕ್ರಮದಲ್ಲಿ ಬಿಡುಗಡೆಗೊಳಿಸಲಾಯಿತು. ಅವುಗಳನ್ನು ಮಾನಸ ಆಫೀಸಿನಿಂದ ಖರೀದಿಸಬಹುದು.
- 14-01-2018 ರಂದು ಶಂಬಲ ಗ್ರೂಪ್‌ನ ಹೊಸ ಬ್ಯಾಚ್ ಪ್ರಾರಂಭವಾಗುತ್ತದೆ. ಚಕ್ರ ಚಾಲನೆಯ ಹಂತದ ತಮ್ಮ ಸಾಧನೆಯನ್ನು ಪೂರ್ಣಗೊಳಿಸಿರುವ ಸಾಧಕರು ಶಂಬಲ ಗ್ರೂಪ್‌ಗೆ ಸೇರಬಹುದು. ಈ ಗ್ರೂಪ್ ಅನ್ನು ಸೇರಬಯಸುವ ಸಾಧಕರು, 31-12-2017 ರೊಳಗೆ ಮಾನಸ ಆಫೀಸಿನಲ್ಲಿ ತಮ್ಮ ಹೆಸರನ್ನು ರಿಜಿಸ್ಟರ್ ಮಾಡಬಹುದು. ದೂರಕಲಿಕೆಯ ಸಾಧಕರು ಕೂಡ ಸೇರಬಹುದು. ಈಗಿನ ಶಂಬಲ ಗ್ರೂಪ್ ಸಾಧಕರು ಕೂಡಾ ತಮ್ಮ ನೋಂದಣಿಯನ್ನು ನವೀಕರಿಸಿಕೊಳ್ಳಲು ತಮ್ಮ ಹೆಸರನ್ನು 31-12-2017 ರೊಳಗೆ ರಿಜಿಸ್ಟರ್ ಮಾಡಬೇಕು.

ಗುರೂಜಿಯವರ ಬ್ಲಾಗ್ ಓದಲು ಮತ್ತು ಅವರ ವಿಡಿಯೋಗಳನ್ನು ನೋಡಲು www.speakingtree.in ವೆಬ್‌ಸೈಟ್‌ಗೆ ಭೇಟಿ ನೀಡಿ.

ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇ-ಮೇಲ್ ಮುಖಾಂತರ ಮಾನಸ ಆಫೀಸ್‌ಅನ್ನು ಸಂಪರ್ಕಿಸಬಹುದು.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 02 | ಶನಿ | ಶಿವದೀಪ |
| 03 | ಭಾನು | ಪೂರ್ಣಿಮಾ<br>ವಿಷ್ಣುದೀಪ |
| 10 | ಭಾನು | ಕೃಷ್ಣ ಅಷ್ಟಮಿ |
| 16 | ಶನಿ | ಮಾಸ ಶಿವರಾತ್ರಿ<br>ಶೂನ್ಯಮಾಸ ಆರಂಭ |
| 18 | ಸೋಮ | ಅಮಾವಾಸ್ಯೆ |
| 24 | ಭಾನು | ಕ್ರಿಸ್‌ಮಸ್ ಮುನ್ನಾ ದಿನ |
| 25 | ಸೋಮ | ಕ್ರಿಸ್‌ಮಸ್ |
| 26 | ಮಂಗಳ | ಶುಕ್ಲ ಅಷ್ಟಮಿ |
| 28 | ಗುರು | ಶುಕ್ಲ ದಶಮಿ |
| 31 | ಭಾನು | ಅಖಂಡ ಧ್ಯಾನ |

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು: ಬೆಳಿಗ್ಗೆ 11-12<br>ಲೈಟ್ ಚಾನಲಿಂಗ್:<br>ಮಧ್ಯಾಹ್ನ 12-1 |
| 25-12-2017 | ಕ್ರಿಸ್‌ಮಸ್ ವಿಶೇಷ ಧ್ಯಾನ:<br>ಮಧ್ಯಾಹ್ನ 12-1 |
| 31-12-2017 | ಅಖಂಡ ಧ್ಯಾನ (ಸಾಮೂಹಿಕ ಧ್ಯಾನ): ಬೆಳಿಗ್ಗೆ 6 ರಿಂದ ಸಂಜೆ 6ರವರೆಗೆ |

### ಅಖಂಡ ಧ್ಯಾನ

31-12-2017 ರಂದು ತಪೋನಗರದಲ್ಲಿ ಬೆಳಿಗ್ಗೆ 6 ರಿಂದ ಸಂಜೆ 6 ರವರೆಗೆ ನಡೆಯುತ್ತದೆ. ಇದರಲ್ಲಿ ಭಾಗವಹಿಸಲು ಇಚ್ಛಿಸುವವರು ತಮ್ಮ ಹೆಸರನ್ನು ಮಾನಸ ಆಫೀಸಿನಲ್ಲಿ ತಾವು ಭಾಗವಹಿಸುವ ಸಮಯದೊಂದಿಗೆ 29-12-2017 ರ ಒಳಗೆ ನೋಂದಾಯಿಸ ಬೇಕಾಗಿ ವಿನಂತಿ.

## ಲೈಟ್ ಚಾನಲಿಂಗ್ ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ**

ಮಾನಸ ಫೌಂಡೇಶನ್ ವಾಲಂಟಿಅರ್ಸ್‌ಗಳು ನಡೆಸಿಕೊಟ್ಟಿದ್ದ ಲೈಟ್ ಚಾನಲಿಂಗ್ ಸೆಷನ್‌ಗಳು ಅದ್ಭುತವಾಗಿದ್ದವು, ಇವು ವಿದ್ಯಾರ್ಥಿಗಳಿಗೆ ಮತ್ತು ಉಪಾಧ್ಯಾಯರುಗಳಿಗೆ ಕಲಿಯುವ ಸೆಷನ್‌ಗಳಾಗಿದ್ದವು. ಸುಮಾರು 350 ಜನರು ಈ ಲೈಟ್ ಚಾನಲಿಂಗ್‌ನಿಂದ ಪ್ರಯೋಜನ ಪಡೆದುಕೊಂಡಿದ್ದಾರೆ. ಲೈಟ್ ಚಾನಲಿಂಗ್ ಅಭ್ಯಾಸದಿಂದ ಅಗಾಧ ಸಂತೋಷ ಮತ್ತು ಏಕಾಗ್ರತೆ ಪಡೆಯುವುದಕ್ಕೆ ಸಹಾಯ ಮಾಡಿದೆಯೆನ್ನುವುದು ನಮ್ಮ ವೈಯಕ್ತಿಕ ಅನುಭವ. ಲೈಟ್ ಚಾನಲಿಂಗ್ ಮಾಡಿದ ನಂತರ ನಾವು ಹೆಚ್ಚು ಚೈತನ್ಯಭರಿತರಾಗಿರುತ್ತೇವೆ ಮತ್ತು ಉಲ್ಲಸಿತರಾಗಿರುತ್ತೇವೆ. ಮುಂದಿನ ದಿನಗಳಲ್ಲಿ ಇಂತಹ ಹೆಚ್ಚು ಸೆಷನ್‌ಗಳನ್ನು ನಡೆಸಲೂ ಇಚ್ಛಿಸಿದ್ದೇವೆ.

– ಪ್ರಿನ್ಸಿಪಾಲ್, ಆದರ್ಶ್ ಗ್ರೂಪ್ ಆಫ್ ಇನ್ಸ್ಟಿಟ್ಯೂಶನ್ಸ್, ಆದರ್ಶ್ ಹೈ ಸ್ಕೂಲ್, ಬೆಂಗಳೂರು.

ನಮ್ಮ ಕಾಲೇಜಿನಲ್ಲಿ ನಡೆಸಿಕೊಟ್ಟಿದ್ದ ಲೈಟ್ ಚಾನಲಿಂಗ್ ಸೆಷನ್ ತುಂಬಾ ಚೆನ್ನಾಗಿತ್ತು, ಸೆಷನ್ ನಂತರ ವಿದ್ಯಾರ್ಥಿಗಳು ತುಂಬಾ ಸಮಾಧಾನವನ್ನು ಅನುಭವಿಸಿದರು. ವಿದ್ಯಾರ್ಥಿಗಳು ಈ ಟೆಕ್ನಿಕ್ ಅಭ್ಯಾಸ ಮಾಡುತ್ತಿದ್ದಾರೆ, ಮತ್ತು ಇದು ಅವರಿಗೆ ಪರೀಕ್ಷಾ ಸಮಯದಲ್ಲಿ ಮತ್ತು ವಿದ್ಯಾಭ್ಯಾಸದಲ್ಲಿ ಏಕಾಗ್ರತೆ ಮೂಡಿಸಿದೆ.

– ಪದ್ಮ ಕಾಂಡರ್‌ಕರ್, ತರಬೇತಿ ಮತ್ತು ನೇಮಕಾತಿ ಅಧಿಕಾರಿ, ಆರ್.ಎಸ್.ಎಸ್.ಪಿ ಮಹಾರಾಷ್ಟ್ರ ಕಾಲೇಜ್ ಆಫ್ ಕಾಮರ್ಸ್, ಪುಣೆ.

ನನ್ನ ಅನುಭವವನ್ನು ನಿಮ್ಮೊಂದಿಗೆ ಹಂಚಿಕೊಳ್ಳುವುದಕ್ಕೆ ನನಗೆ ಸಂತೋಷವಾಗುತ್ತಿದೆ. ಮನಸ್ಸಿಗೆ ಸಮಾಧಾನ ತಂದು ಕೊಳ್ಳುವುದಕ್ಕೆ ಈ ಲೈಟ್ ಚಾನಲಿಂಗ್ ಟೆಕ್ನಿಕ್ ಸಹಾಯ ಮಾಡುತ್ತದೆ. ಇದು ಜನರ ನಡುವೆ ಪ್ರೀತಿ, ಶಾಂತಿ, ಸಾಮರಸ್ಯ ಮೂಡಿಸುತ್ತದೆ. ಇದು ಸಕಾರಾತ್ಮಕ ಚೈತನ್ಯವಾಗಿದ್ದು, ಒಳ್ಳೆಯ ಆರೋಗ್ಯದಿಂದ ಇರುವಂತೆ ಮಾಡುತ್ತದೆ. ನಾನು ಒತ್ತಡಕ್ಕೆ ಒಳಗಾದಾಗಲೆಲ್ಲ ಲೈಟ್ ಚಾನಲಿಂಗ್ ಅಭ್ಯಾಸ ಮಾಡುತ್ತೇನೆ. ಇದರಿಂದ ಒತ್ತಡ ನಿವಾರಣೆಯಾಗಿ ನಾನು ಬಹಳ ಸಂತೋಷದಿಂದ ಇರುತ್ತೇನೆ.

ನಮ್ಮ ಶಾಲೆಯ ಪ್ರಾರ್ಥನಾ ಸಮಯದಲ್ಲಿ 7 ರಿಂದ 10 ನಿಮಿಷಗಳವರೆಗೆ ಲೈಟ್ ಚಾನಲಿಂಗ್ ಅಭ್ಯಾಸ ಮಾಡುತ್ತೇವೆ. ಈ ಟೆಕ್ನಿಕ್ ಅಭ್ಯಾಸದಿಂದ ತಮ್ಮ ವಿದ್ಯಾಭ್ಯಾಸದಲ್ಲಿ ಏಕಾಗ್ರತೆಯಿಂದ ಓದಲು ಸಾಧ್ಯವಾಗಿದೆಯೆಂದು ಅನೇಕ ವಿದ್ಯಾರ್ಥಿಗಳು ಸಹ ತಿಳಿಸಿದ್ದಾರೆ. ಇದು ಅವರಲ್ಲಿ ಶಿಸ್ತು, ಪ್ರೀತಿ, ಮತ್ತು ಸಮಾಧಾನ ತಂದಿದೆ. ವಿದ್ಯಾರ್ಥಿಗಳು ಒಬ್ಬರಿಗೊಬ್ಬರು ಸಹಾಯ ಮಾಡುವುದಕ್ಕೆ ಕಲಿತಿದ್ದಾರೆ. ಮತ್ತು ಒಬ್ಬರಿಗೊಬ್ಬರು ತಮ್ಮ ಅನುಭವಗಳನ್ನು ಹಂಚಿಕೊಳ್ಳುವುದನ್ನು ಕಲಿತಿದ್ದಾರೆ. ಮನು ಕುಲಕ್ಕೆ ಬೆಲೆಕಟ್ಟಲಾಗದ ಕೊಡುಗೆಯನ್ನು ಕೊಟ್ಟಿರುವ ಗುರುವಿಗೆ ನನ್ನ ಧನ್ಯವಾದಗಳು.

– ಶ್ರೀಮತಿ ಪದ್ಮಿನಿ ಜಯರಾಮ್, ಮುಖ್ಯೋಪಾಧ್ಯಾಯರು, ಆರ್.ಬಿ.ಬಿ.ಪಿ.ಎ.ಮ್. ಹೈ ಸ್ಕೂಲ್, ಫ್ರೇಜ಼ರ್ ಟೌನ್, ಬೆಂಗಳೂರು.

## ತಪೋನಗರ ಡೈರಿ

**ಸೀಮಾ ಅಲ್‌ಮೇಲ್; ಅನು: ಪಾಂಡುರಂಗ**

ಬಿರುಗಾಳಿಯ ಮಧ್ಯ ಭಾಗ ಯಾವಾಗಲೂ ಶಾಂತವಾಗಿರುತ್ತದೆ. ಋಷಿಗಳ ವಾಸ ಸ್ಥಳವಾದ ತಪೋನಗರ, ಪ್ರಳಯದ ಬಿರುಗಾಳಿಯ ನಡುವೆಯೂ ಬಲಿಷ್ಠವಾಗಿ, ಸಹನೆಯಿಂದ ಮತ್ತು ಸಮಾಧಾನದಿಂದ ಇರುತ್ತದೆ. ಹಾಗಿದ್ದರೂ ತಪೋನಗರ ನಿಷ್ಕ್ರಿಯವಾಗಿಲ್ಲ. ಋಷಿಗಳಿಂದ, ಧ್ಯಾನಿಗಳಿಂದ, ವಿಶ್ವ ಚೇತನ ಗೋಪುರ ಮತ್ತು ಇನ್ನಿತರ ವಿಶೇಷತೆಗಳಿಂದ ಕೂಡಿದ ತಪೋನಗರ, ಮೌನದಲ್ಲಿಯೇ ಇಡೀ ವಿಶ್ವಕ್ಕೆ ಶಾಂತಿಯ ಕಂಪನಗಳನ್ನು ಹರಡುತ್ತಿದೆ. ಮುಂದಿನ ಭವಿಷ್ಯದ ದಿನಗಳನ್ನು ಸಮರ್ಥವಾಗಿ ಎದುರಿಸುವ ಒಂದು ಮಹಾನ್ ಭರವಸೆಯೊಂದಿಗೆ ತಪೋನಗರ ತನ್ನ ಒಡಲಿನಲ್ಲಿ ಉನ್ನತ ಮಟ್ಟದ ಆಧ್ಯಾತ್ಮಿಕ ಚೈತನ್ಯಗಳನ್ನು ಹುದುಗಿಸಿಕೊಂಡಿದೆ. ಸಹನೆಯನ್ನು ಕಳೆದುಕೊಳ್ಳದೇ, ಪ್ರಪಂಚದಲ್ಲಿ ಸಂಭವಿಸುತ್ತಿರುವ ಅನ್ಯಾಯ ಮತ್ತು ಹಿಂಸೆಗಳಿಂದ ಖಿನ್ನತೆಗೆ ಒಳಗಾಗದೇ ಇರುವುದು ಸಹ ಒಂದು ಸವಾಲಾಗಿದೆ. ಇದಕ್ಕಾಗಿ ಲೈಟ್ ಮಾಸ್ಟರ್‌ಗಳು ಅನುಯಾಯಿಗಳಿಗೆ ತರಬೇತಿ ನೀಡಿದ್ದಾರೆ.

ಅಕ್ಟೋಬರ್ ತಿಂಗಳಿನಲ್ಲಿ ಸುರಿದ ಮಳೆ ಮತ್ತು ಸದಾ ಮೋಡ ಮುಸುಕಿದ ಹವಾಮಾನ ತಪೋನಗರದ ದೀಪಾವಳಿಯ ಸಂಭ್ರಮಕ್ಕೆ ತಡೆ ಉಂಟು ಮಾಡಲಿಲ್ಲ. ಪಟಾಕಿಗಳನ್ನು ಹಚ್ಚುವುದರ ಜೊತೆಗೆ ದೀಪಗಳನ್ನು ಬೆಳಗಿಸಲಾಗಿತ್ತು. ನಿವಾಸಿಗಳೆಲ್ಲರೂ ಹೊಸ ಬಟ್ಟೆತೊಟ್ಟು ಹಬ್ಬದ ಸಂಭ್ರಮವನ್ನು ಹೆಚ್ಚಿಸಿದ್ದರು. ನವರಾತ್ರಿ ಹಬ್ಬದ ಪ್ರಯುಕ್ತ ಗರ್ಬ ನೃತ್ಯವನ್ನು ಆಯೋಜಿಸಲಾಗಿತ್ತು. ಈ ನೃತ್ಯ ಕಾರ್ಯಕ್ರಮದಲ್ಲಿ ಇಶಿತ ಚಲಪತಿ, ಶ್ರುತಿ ಮಿಶ್ರ, ಇಶೀಕ ಶೆಟ್ಟಿ, ಸ್ವಸ್ತಿಕ, ಪ್ರತಿ ನೆಡು, ಶ್ರವಣ್, ರಕ್ಷಿತ್ ಮಿಶ್ರ, ಯುತಿಕ ಮತ್ತು ಸಯುಜ್ಯ ಆಯಾಚಿತ್ ಭಾಗವಹಿಸಿದ್ದರು. ಶ್ರೀಮತಿ ಮಾಧವಿ ಚಲಪತಿ ಮತ್ತು ಶ್ರೀಮತಿ ಪ್ರಿಯಾಂಕ ಮಿಶ್ರ ಅವರು ಈ ನೃತ್ಯದ ಸಿದ್ಧತೆ ಮತ್ತು ಸಂಯೋಜನೆ ಮಾಡಿದ್ದರು. ಈ ನೃತ್ಯ ಕಾರ್ಯಕ್ರಮಕ್ಕೆ ಇತರೆ ಅನೇಕರೂ ಸಹಕರಿಸಿದ್ದರು. ಭೋಜನಕ್ಕೂ ಮೊದಲು ನಿವಾಸಿಗಳ ಹುಟ್ಟುಹಬ್ಬದ ಆಚರಣೆ ನಡೆಯಿತು.

ಮತ್ತೊಂದು ವರ್ಷ ವೇಗವಾಗಿ ಕೊನೆಗೊಳ್ಳುತ್ತಿರುವಾಗ, ಆಳವಾದ ಆತ್ಮಾವಲೋಕನ ನಮ್ಮ ಅಧ್ಯಾತ್ಮಿಕ ಪಯಣದಲ್ಲಿ ನಾವು ಎಲ್ಲಿದ್ದೇವೆ ಎಂಬುದನ್ನು ಹೇಳುತ್ತದೆ. ಬೆಳಕಿನ ಯುಗ ಸಮೀಪಿಸುತ್ತಿದ್ದಂತೆ, ತಪೋನಗರವೂ ಸಹ ಮುಂದಿನ ಸವಾಲುಗಳನ್ನು ಎದುರಿಸಲು ಸಿದ್ಧವಾಗುತ್ತಿದೆ. ಒಳ್ಳೆಯ ದಿನಗಳಿಗೆ ಪೂರ್ವಭಾವಿಯಾಗಿ ಕಷ್ಟದ ದಿನಗಳನ್ನು ಕಳೆಯಬೇಕಾಗುತ್ತದೆ. ಮುಂದಿನ ಹಂತದ ದಿನಗಳನ್ನು ತಪೋನಗರ ತೆರೆದ ಬಾಹುಗಳಿಂದ ಸ್ವಾಗತಿಸುತ್ತದೆ. ■

## ಲೈಟ್ ಚಾನಲ್ಸ್

**ವಿಶ್ವ ಸಂಚಲನ**

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡುವುದು.

# ಗುರೂಜಿಯವರ ನುಡಿಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

ಆಗಸ್ಟ್ 2005

ನಿನ್ನೆಯ ಸೂಕ್ಷ್ಮ ಪ್ರಯಾಣ ಕಷ್ಟವಾಯಿತು. ಎಲ್ಲವನ್ನೂ ಸರಿಯಾದ ರೀತಿಯಲ್ಲಿ ವ್ಯವಸ್ಥೆಗೊಳಿಸಲು ಪ್ರಯತ್ನಿಸಿದರೂ, ಅದು ಹೇಗೋ ನಾನು ತರಗತಿಗಳಿಗೆ ಸಿದ್ಧವಾಗಬೇಕಾದ್ದರಿಂದ ನಿದ್ರೆ ಮಾಡದೆ ಎಚ್ಚರವಾಗಿರಬೇಕಾಗುತ್ತದೆ. ನೆನ್ನೆ ಕೂಡ ಹಾಗೇ ಆಯಿತು. ಕೆಲವೊಮ್ಮೆ ಋಷಿಗಳನ್ನು ನಾನು ಅಭಿನಂದಿಸುತ್ತೇನೆ, ನೆನ್ನೆ ಅವರಿಗೆ ಹೇಳಿದೆ, 'ನೀವು ಕರುಣಾಳುಗಳು ಮತ್ತು ಮಹಾತ್ಮರು, ನಾನು ಎಚ್ಚರವಾಗಿದ್ದಾಗಲೂ ನನ್ನನ್ನು ಕರೆದುಕೊಂಡುಹೋಗುತ್ತೀರಿ. ನಾನು ಎಚ್ಚರವಾಗಿದ್ದಾಗ, ಒಮ್ಮೆ ಋಷಿಗಳು ಬಂಗಾರದ ಬೆಳಕನ್ನು ಹರಡುತ್ತಿರುವುದನ್ನು ನೋಡಿದೆ. ನಾನು ನಮ್ಮ ದೇಶವನ್ನು ನೋಡಿದೆನಾದರೂ ಇಡೀ ಪ್ರಪಂಚದ ಜವಾಬ್ದಾರಿಯನ್ನು ಹೊಂದಿರುವ ಋಷಿಗಳು ಹೆಚ್ಚು ಬೆಳಕನ್ನು ಅಮೇರಿಕಾಗೆ ಹರಡುತ್ತಿದ್ದಿರಬೇಕು! ಅವರು ಹರಡುತ್ತಿರುವ ಬೆಳಕು ಪ್ರಳಯ ಪ್ರಕ್ರಿಯೆಯನ್ನು ಚುರುಕುಗೊಳಿಸುವುದರ ಜೊತೆಗೆ ವಿವೇಕವನ್ನೂ ತರುತ್ತದೆಂದು ನನಗೆ ತಿಳಿದಿತ್ತು. ಬಹಳ ಜನರನ್ನು ಕಂಡೆ, ಅಂದರೆ ಸೂಕ್ಷ್ಮ ಮಟ್ಟದ ಜನರನ್ನು ಹಾಗೂ ನಮ್ಮ ಜನಗಳನ್ನೂ. ಅವರನ್ನು ಗುರುತಿಸಲಾಗದಿದ್ದರೂ ಅವರನ್ನು ಗಮನಿಸುತ್ತಿದ್ದೆ. ಋಷಿಗಳು ಅವರೊಂದಿಗೆ ಮಾತನಾಡುತ್ತಾ ಅವರಿಗೆ ತರಬೇತಿ ನೀಡುತ್ತಿದ್ದಾರೆಂದು ನಾನು ಅರಿತೆ. ಈ ಜನರು ಹೇಗೆ ಮಾಡುತ್ತಾರೆನ್ನುವುದನ್ನು ಅವರು ಮೊದಲಿಗೆ ಗಮನಿಸುತ್ತಿದ್ದರು. ನಮಗೆ ಚಾನಲ್ ಮಾಡುವುದು ತಿಳಿದಿದೆ ಆದರೆ ಇನ್ನೂ ಅನೇಕ ವಿಧಾನಗಳಿವೆಯೆಂದು ಋಷಿಗಳು ಹೇಳಿದರು. ಕೆಲವು ಸ್ಥಳಗಳಿಗೆ ನಾವು ಹೆಚ್ಚು ಬೆಳಕನ್ನು ಚಾನಲ್ ಮಾಡಬೇಕೆಂದು ಅವರು ಹೇಳಿದರು. ಸಮುದ್ರದೊಳಗೆ ಸಬ್‌ಮೆರಿನ್‌ನಲ್ಲಿ ಏಳು ಜನರು ಸಿಕ್ಕಿಹಾಕಿಕೊಂಡಿದ್ದಾರೆ, ಬಹುಶಃ ಅವರಿಗೆ ನಾವು ಹೆಚ್ಚು ಬೆಳಕನ್ನು ಕಳಿಸಬೇಕು. ಇದು ಮಾನವ ಸಹಜ ಪ್ರವೃತ್ತಿ. ಜನರು ನನ್ನನ್ನು ನೋಡಿ ನಗಬಹುದು, ಆದರೆ ನಾಳೆ ಬೆಳಿಗ್ಗೆ 'ಡಿಸ್ಕವರಿ' ಭೂಮಿಯ ವಾತಾವರಣವನ್ನು ಪ್ರವೇಶಿಸಿದಾಗ ಏನಾಗಬಹುದು ಎಂಬ ಆತಂಕ ನನಗಿದೆ. ಹಿಂದಿನ ಸಲ 'ಕೊಲಂಬಿಯಾ'ದಲ್ಲಿ ನಾವು ಚಾವ್ಲ ಅವರನ್ನು ಕಳೆದುಕೊಂಡಿದ್ದೆವು. ಅದರ ಬಗ್ಗೆ ನಾನು ಯೋಚನೆಮಾಡಬೇಕೆ? ಹೌದು, ಅದರ ಬಗ್ಗೆ ನನಗೆ ಚಿಂತೆ ಇರಬೇಕು. ನೈಜೀರಿಯಾದಲ್ಲಿ ಬರಗಾಲವಿದೆ, ಅದರ ಬಗ್ಗೆಯೂ ನಾವು ಚಿಂತೆಗೊಳಗಾಗಬೇಕು. ನಾವು ಒಂದೇ ಪ್ರಪಂಚದಲ್ಲಿ ಬದುಕುತ್ತಿರುವುದರಿಂದ, ಇದರ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸಿದರೂ, ಪ್ರಯತ್ನಿಸದಿದ್ದರೂ ಅದು ನಮ್ಮ ಮೇಲೆ ಪರಿಣಾಮ ಬೀರಿಯೇ ಬೀರುತ್ತದೆ. ಪ್ರಜ್ಞೆಯ ಮಟ್ಟದಲ್ಲಿ ಅದು ನಮ್ಮನ್ನು ತಟ್ಟುತ್ತದೆ. ಮುಂಬೈನ ಜಡಿಮಳೆಯು, ಅಲ್ಲಿ ನಮ್ಮವರು ಇರಲಿ, ಇಲ್ಲದಿರಲಿ, ಅದು ನಮ್ಮನ್ನು ತಟ್ಟುತ್ತದೆ. ಅದು ನನಗೆ ಸಂಬಂಧಿಸಿಲ್ಲ ಎಂದು ನಾವು ಹೇಳುವಹಾಗಿಲ್ಲ. ಆಧ್ಯಾತ್ಮಿಕ ವ್ಯಕ್ತಿಯೊಬ್ಬನು 'ನಾನು ಚೆನ್ನಾಗಿದ್ದೇನೆ, ನನ್ನ ಸಂಸಾರ ಚೆನ್ನಾಗಿದೆ,' ಎಂದು ಹೇಳುವ ಹಾಗಿಲ್ಲ. ಯಾವಾಗಲೂ ಸಮಸ್ಯೆಗಳಿರುತ್ತವೆ. ಆದ್ದರಿಂದಲೇ ನಾವು ಈ ಭೂಮಿಯ ಮೇಲೆ ಕೊನೆಯ ಕಣ್ಣೀರು ಒರೆಸುವವರೆಗೂ ವಿಶ್ರಮಿಸುವಂತಿಲ್ಲ. ಋಷಿಗಳ ಕೆಲಸ ಅಲ್ಲಿಯವರೆಗೂ ನಿಲ್ಲುವುದಿಲ್ಲ.

ಈ ವ್ಯಕ್ತಿಗಳಿಗೆ ಮಹತ್ತರವಾದ ವಿಷಯಗಳನ್ನು ವಿವರಿಸಿ ಹೇಳುತ್ತಿದ್ದುದನ್ನು ನಾನು ಕಂಡೆ. ಅದು, ನಿರ್ದಿಷ್ಟವಾದ ಚೈತನ್ಯವನ್ನು ಸಂಗ್ರಹಿಸಿ, ನಿರ್ದಿಷ್ಟ ಸ್ಥಳಕ್ಕೆ ನಿರ್ದಿಷ್ಟ ತೀವ್ರತೆಯೊಂದಿಗೆ ಕಳಿಸುವುದಾಗಿತ್ತು. ನಾವು ಹೆಚ್ಚು ಚೈತನ್ಯಗಳನ್ನೂ ಹರಡುವಂತಿಲ್ಲ. ನಾವು ಹೇಗೆ ಅದನ್ನು ತೀರ್ಮಾನಿಸುವುದು? ನನಗದು ಅರ್ಥವಾಗಲಿಲ್ಲ. ನನಗದರ ನೆನಪಿಲ್ಲ, ಆದರೆ ಅವರಿಗೆ ತರಬೇತಿ ನೀಡುತ್ತಿದ್ದುದು ಹಾಗೆ. ನಮ್ಮಲ್ಲಿ ಅನೇಕರೂ ಅಲ್ಲಿದ್ದೆವು. ಇತ್ತೀಚಿನ ದಿನಗಳಲ್ಲಿ, ಸೂಕ್ಷ್ಮ ಪ್ರಯಾಣಗಳು ಒಂದು ರೀತಿಯ ತರಬೇತಿಯಂತೆ ಆಗಿವೆ, ಇದೊಂದು ಅದ್ಭುತ ಸಂಗತಿಯಾಗಿದೆ. ಭೌತಿಕ ಮಟ್ಟದಲ್ಲಿ ನಾವು ಬೆಳೆಯುತ್ತಿದ್ದೇವೆ ಹಾಗೂ ಮತ್ತೊಂದು ಮಟ್ಟದಲ್ಲಿ ನಮಗೆ ತರಬೇತಿ ನೀಡಲಾಗುತ್ತಿದೆ.

ಆಧ್ಯಾತ್ಮಿಕ ನಿಯಮವೊಂದಿದೆ. ಅದು ಹೇಳುತ್ತದೆ, 'ನಾವು ಏನನ್ನೇ ಕಳುಹಿಸಿದರೂ, ಅದು ಅನೇಕ ಪಟ್ಟು ಹೆಚ್ಚಾಗಿ ನಮಗೇ ಹಿಂದಿರುಗುತ್ತದೆ.' ಮತ್ತೊಂದು ವಿಷಯವಿದೆ, ಪ್ರತಿಯೊಂದು ಆಲೋಚನೆಯೂ, ಪ್ರತಿಯೊಂದು ಭಾವನೆಯೂ ಕಂಪಿಸುತ್ತದೆ, ನಮ್ಮ ಭಾವನೆಯನ್ನು ವ್ಯಕ್ತಪಡಿಸಬೇಕಾದ ಅವಶ್ಯಕತೆ ಇಲ್ಲ, ನಮ್ಮ ಆಲೋಚನೆಯನ್ನು ಮಾತಿನಲ್ಲಿ ತಿಳಿಸಬೇಕಾದ ಅವಶ್ಯಕತೆ ಇಲ್ಲ. ನನ್ನಲ್ಲಿರುವ ಆಲೋಚನೆಯು ಕಂಪಿಸತೊಡಗುತ್ತದೆ, ನಂತರ ಈ ಕಂಪನವು ಹೊರ ಹೋಗುತ್ತದೆ. ಆಧ್ಯಾತ್ಮಿಕ ನಿಯಮದ ಪ್ರಕಾರ ಯಾವುದು ಹೊರ ಹೋಗುತ್ತದೋ ಅದು ಅನೇಕ ಪಟ್ಟು ಹಿಂದಿರುಗುತ್ತದೆ. ನನ್ನಲ್ಲಿ ಒಳ್ಳೆಯ ಆಲೋಚನೆಗಳಿದ್ದರೆ ಅದರ ಒಳ್ಳೆಯ ಪರಿಣಾಮಗಳು ಅನೇಕಪಟ್ಟು ಹೆಚ್ಚಾಗಿ ಹಿಂದಿರುಗುತ್ತದೆ. ಸಹಜವಾಗಿಯೇ ನಮ್ಮಲ್ಲಿ ಒಳ್ಳೆಯ ಆಲೋಚನೆಗಳು ಇಲ್ಲದಿದ್ದಾಗ, ಅದರದೇ ಅನೇಕ ಪಟ್ಟು ನಮಗೆ ಹಿಂದಿರುಗುತ್ತದೆ. ಪ್ರತಿದಿನವೂ ನಮ್ಮ ಶಾರೀರಿಕ ವ್ಯವಸ್ಥೆಯು ಸಾವಿರಾರು ಆಲೋಚನೆಗಳು ಮತ್ತು ಭಾವನೆಗಳನ್ನು ಹುಟ್ಟಿಸುತ್ತಿರುತ್ತದೆ. ನಾವದನ್ನು ವಿಶ್ಲೇಷಿಸಲು ಮೊದಲಾಗಬೇಕು, ವಿಶ್ಲೇಷಣೆಯನ್ನಷ್ಟೇ ಮಾಡಬೇಕು, ಚಿಂತೆ ಮಾಡಬಾರದು. ಅದಕ್ಕೆ ಅರಿವು ಮಾತ್ರವೇ ಸಾಕು. ಮಾರನೆಯ ದಿನ, ಇವು ಒಳ್ಳೆಯ ಆಲೋಚನೆಗಳಲ್ಲವೆಂಬ ಅರಿವು ನಮಗೆ ಮೂಡುತ್ತದೆ ಮತ್ತು ನಾವು ಅವುಗಳನ್ನು ಹತ್ತಿಕ್ಕಬೇಕೆಂದು ಅರ್ಥಮಾಡಿಕೊಳ್ಳುತ್ತೇವೆ.

ಮುಂದೊಮ್ಮೆ ಒಂದೇ ಒಂದು ನಕಾರಾತ್ಮಕ ಆಲೋಚನೆಯೂ ನಮ್ಮನ್ನು ಪ್ರವೇಶಿಸದಿರುವ ಅಥವ ನಮ್ಮಲ್ಲಿ ಹುಟ್ಟದಿರುವ ದಿನ ಬರುತ್ತದೆ, ನನ್ನ ಈ ಮಾತನ್ನು ನಂಬಿ. ಒಳ್ಳೆಯದು ಮಾತ್ರವೇ ನಮ್ಮಲ್ಲಿ ಕಂಪಿಸುತ್ತಿರುತ್ತದೆ. ಆಗಲೇ ನಮ್ಮ ಸಾಧನೆ ಒಂದು ಹಂತವನ್ನು ತಲುಪುವುದು. ನಮ್ಮ ಆಲೋಚನೆಗಳಿಂದ ನಮ್ಮ ಭವಿಷ್ಯವನ್ನು ರೂಪಿಸುತ್ತೇವೆ. ನನ್ನಿಂದ ಒಳ್ಳೆಯ ಆಲೋಚನೆಯೊಂದು ಹೊರಹೊಮ್ಮುತ್ತದೆ, ಒಳ್ಳೆಯದೆಲ್ಲವನ್ನೂ ಹಿಂದಿರುಗಿ ಪಡೆಯುತ್ತೇನೆ. ನಾನು ಹೊರಗೆ ಕಳಿಸುವುದು ಮತ್ತು ಹಿಂದಿರುಗಿ ಪಡೆಯುವುದು ಏಕರೀತಿಯದ್ದಾಗಿರದೆ ಇರಬಹುದು. ಅದು ಯಾವುದೇ ರೀತಿಯಲ್ಲಿ ಹಿಂದಿರುಗಿ ಬರಬಹುದು – ಒಂದು ಸಹಾಯ, ಒಂದು ಒಳ್ಳೆಯ ಆಲೋಚನೆ, ಆರ್ಥಿಕ ಸಹಾಯ, ಉತ್ತಮ ಆರೋಗ್ಯ ಇತ್ಯಾದಿ. ನಕಾರಾತ್ಮಕ ಆಲೋಚನೆಗಳು ಬಹಳ ಸಮಸ್ಯೆಗಳನ್ನು ಆಕರ್ಷಿಸುತ್ತವೆ, ಅವು ಆರ್ಥಿಕ ಸಮಸ್ಯೆಯಿಂದ ಮೊದಲು ಮಾಡಿ ಅನಾರೋಗ್ಯದವರೆಗೆ ಯಾವುದಾದರೂ ಆಗಬಹುದು. ಇದು ಸಾಧನೆಯಲ್ಲಿ ಅತಿ ಮುಖ್ಯವಾಗುತ್ತದೆ, ಏಕೆಂದರೆ ಇದು ನಾವು ಬದಲಾಗಲು ಸಹಾಯಮಾಡುತ್ತದೆ ಅಥವ ಬದಲಾಗಲು ಒತ್ತಡ ತರುತ್ತದೆ. ಇದಿಲ್ಲದಿದ್ದರೆ, ಗಂಟೆಗಟ್ಟಲೆ ಮಾಡುವ ಧ್ಯಾನ ಹೆಚ್ಚು ಉಪಯೋಗಕ್ಕೆ ಬರುವುದಿಲ್ಲ.

ಪ್ರಪಂಚದಾದ್ಯಂತ 1,44,000 ಋಷಿಗಳು ಅಥವ ಋಷಿಕಾರ್ಯಕರ್ತರು ಹರಡಿದ್ದಾರೆಂದು ನಾವು ಹೇಳುತ್ತೇವೆ. ಅವರು ತಮ್ಮ ಸುತ್ತಲಿರುವ ಜನರಿಗೆ ಶಿಕ್ಷಣ ನೀಡುತ್ತಿರುತ್ತಾರೆ ಮತ್ತು ಆಧ್ಯಾತ್ಮಿಕ ಮಾರ್ಗದರ್ಶನ ನೀಡುತ್ತಿರುತ್ತಾರೆ. 'ಇಲ್ಲಿಂದ ಯೋಗಿಗಳು ಅಮೆರಿಕಾಗೆ ಹೋಗಿ ಏಕೆ ಕೇಂದ್ರಗಳನ್ನು ತೆರೆಯಬೇಕು, ಅದರ ಅವಶ್ಯಕತೆಯಿದೆಯೇ?' ಎಂದು ಒಬ್ಬರು ನಮ್ಮನ್ನು ಕೇಳಿದರು. ಇದೊಂದು ಉತ್ತಮ ಪ್ರಶ್ನೆ. ಅದರ ಅವಶ್ಯಕತೆಯಿಲ್ಲವೆನ್ನುವುದು ನನ್ನ ಸ್ವಂತ ಅಭಿಪ್ರಾಯ. ಇಲ್ಲಿರುವ ವ್ಯಕ್ತಿ ಅಥವ ಇಲ್ಲಿರುವ ಋಷಿ, ತನ್ನ ಪ್ರದೇಶದಲ್ಲಿಯೇ ಕೆಲಸ ಮಾಡಿದರೆ ಸಾಕು. ಅವರು ಬೇರೆ ಪ್ರದೇಶಕ್ಕೆ ಹೋಗಬೇಕಾಗಿಲ್ಲ. ಅಲ್ಲಿಯ ಸಂಸ್ಕೃತಿಗಳು, ಆಚಾರ ವಿಚಾರಗಳು, ನಂಬಿಕೆಗಳು ಬೇರೆಯೇ ಇರುತ್ತವೆ. ಅಲ್ಲಿಯೇ ಜನ್ಮತಳೆದ ವ್ಯಕ್ತಿಯೊಬ್ಬನು ಅವರದೇ ರೀತಿಯಲ್ಲಿ ತಿಳಿಹೇಳಬಲ್ಲ. ವ್ಯಕ್ತಿಯೊಬ್ಬನನ್ನು ಆಧ್ಯಾತ್ಮಿಕವಾಗಿ ಮೇಲೆತ್ತುವುದೇ ಉದ್ದೇಶ. ಅದು ಮತಾಚರಣೆಗಳನ್ನು ನಿಲ್ಲಿಸುವುದಕ್ಕಾಗಿ ಅಲ್ಲ. ಪೂಜೆಗಳನ್ನು ಮಾಡುವ ಜನರು ಒಳ್ಳೆಯವರಿರಬಹುದು, ಮಹಾತ್ಮರುಗಳೂ ಆಗಿರಬಹುದು. ಹಾಗಿದ್ದರೆ ಇಲ್ಲಿನ ಜನರೇಕೆ ಅಮೇರಿಕಾಗೆ ಹೋಗುತ್ತಾರೆ? ಸ್ವಾಮಿ ವಿವೇಕಾನಂದರು ಅಮೆರಿಕಾಗೆ ಏಕೆ ಹೋದರು? ಈ ಪ್ರಶ್ನೆಗೆ ನನ್ನ ಗುರು ಉತ್ತರ ನೀಡಿದ್ದರು. ಅವರು ಹೇಳಿದರು, 'ಸ್ವಾಮಿ ವಿವೇಕಾನಂದರು ಶಿಕ್ಷಣ ನೀಡುವುದಕ್ಕಾಗಿ ಅಲ್ಲಿಗೆ ಹೋಗಿದ್ದರು! ಆಮದು ಆದುದನ್ನು ಇಲ್ಲಿನ ಜನರು ಯಾವಾಗಲೂ ಗುರುತಿಸುತ್ತಾರೆ!! ಆದ್ದರಿಂದ ಸ್ವಾಮಿ ವಿವೇಕಾನಂದರು ಅಲ್ಲಿಗೆ ಹೋಗಲೇಬೇಕಾಯಿತು, ನಂತರ ಜನರು ಅವರನ್ನು ಗಮನಿಸಲು ಪ್ರಾರಂಭಿಸಿದರು! ಪರಮಹಂಸ ಯೋಗಾನಂದರು ಮತ್ತು ಮಹರ್ಷಿ ಮಹೇಶ್ ಯೋಗಿಗಳ ವಿಷಯಗಳಲ್ಲೂ ಇದೇ ರೀತಿ ನಡೆಯಿತು. ಹೊರದೇಶಕ್ಕೆ ಹೋಗಲು ನನಗೆ ಕೂಡ ಒಮ್ಮೆ ಪ್ರಸ್ತಾವನೆಯೊಂದು ಬಂದಿತ್ತು. ನಾನು ಋಷಿಗಳನ್ನು ಕೇಳಿದೆ. ಅವರು ಹೇಳಿದರು, "ನೀವು ಅಲ್ಲಿಗೆ ಹೋಗಬೇಕಾಗಿಲ್ಲ, ಇಲ್ಲಿಯೇ ಇರಿ. ಅಲ್ಲಿ ಆಗಲೇ ಸಾಕಷ್ಟು ಜನರಿದ್ದಾರೆ." ನಮ್ಮ ಕೆಲಸ ಬೇರೊಂದು ಆಯಾಮದಲ್ಲಿದೆ. ಈ ಕೆಲಸಕ್ಕೆ ನಾವು ಬದ್ಧರಾಗಿರೋಣ. ■

## ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

08–10–2017

ಗುರೂಜಿಯವರು ತರಗತಿಯೊಂದರಲ್ಲಿ ಹೇಳಿದ ವಿಷಯವನ್ನು ನೆನಪುಮಾಡಿಕೊಳ್ಳುತ್ತಿದ್ದೇನೆ. ಅವರು ಹೇಳಿದರು, "ಪ್ರತಿಯೊಂದು ಕ್ಷಣವೂ ನಾವೇನನ್ನಾದರೂ ಮಾಡುತ್ತಿರುತ್ತೇವೆ. ಯಾವುದಾದರೊಂದು ರೀತಿಯ ಚಟುವಟಿಕೆಯಲ್ಲಿ ತೊಡಗಿರುತ್ತೇವೆ, ನಾವು ಯೋಚಿಸುತ್ತಿರುತ್ತೇವೆ, ಭಾವನೆಗೊಳಗಾಗಿರುತ್ತೇವೆ. ಅದಕ್ಕೆ ಯಾವಾಗಲೂ ಪ್ರತಿಪರಿಣಾಮ ಇರುತ್ತದೆ. ಇದೇ ಕರ್ಮದ ನಿಯಮ. ಆದರೆ ಯೋಗಿಯೊಬ್ಬರು ಅಥವ ಆಧ್ಯಾತ್ಮಿಕ ಮಹಾತ್ಮರೊಬ್ಬರು ಈ ಕರ್ಮದ ನಿಯಮಗಳನ್ನು ಮೀರಿರುತ್ತಾರೆ. ಯೋಗಿ ಕೂಡ ಏನನ್ನಾದರೂ ಮಾಡುತ್ತಿರುತ್ತಾರೆ. ಈ ದೇಹದಲ್ಲಿರುವವರೆಗೂ ಮತ್ತು ಈ ಪ್ರಪಂಚದಲ್ಲಿ ಬದುಕಿರುವವರೆಗೂ ನಾವು ಏನನ್ನಾದರೂ ಮಾಡುತ್ತಿರುತ್ತೇವೆ. ಆದರೆ ಯೋಗಿಯೊಬ್ಬನು ಅದನ್ನು ವೈರಾಗ್ಯದಿಂದ ಮಾಡುತ್ತಾನೆ. ಆತ ಸಾಕ್ಷೀಭಾವದಲ್ಲಿರುತ್ತಾನೆ. ನನ್ನ ಶಾರೀರಿಕ ವ್ಯವಸ್ಥೆ ಇದನ್ನೆಲ್ಲ ಮಾಡುತ್ತಿದೆ, ನಾನಲ್ಲ ಎಂದು ಅವರು ಹೇಳುತ್ತಾರೆ. ತಮ್ಮ ಅರಿವನ್ನು ಯಾವಾಗಲೂ ದೇಹ, ಮನಸ್ಸು ಮತ್ತು ಬುದ್ಧಿಯ ಮಟ್ಟಗಳಿಗಿಂತ ಮೇಲಿರಿಸಿಕೊಳ್ಳುತ್ತಾರೆ. ಅವರಿಗೆ ವೈರಾಗ್ಯ ಸಹಜವಾದ ಗುಣ. ನಮ್ಮ ಅರಿವನ್ನು ಉನ್ನತ ಮಟ್ಟದಲ್ಲಿರಿಸಿಕೊಂಡಾಗ ಸರಿಯಲ್ಲದೇನನ್ನೂ ನಾವು ಮಾಡುವುದಿಲ್ಲ. ಹಾಗಿದ್ದಾಗ ಅಂತಹ ಕೆಲಸಗಳು ಆಕರ್ಷಿಸಬಹುದಾದ ಪ್ರತಿಪರಿಣಾಮಗಳು ನಮ್ಮ ಆಧ್ಯಾತ್ಮಿಕ ಪ್ರಗತಿಗೆ ಅಥವ ನಮ್ಮ ಸಾಧನೆಗೆ ಅಡ್ಡ ಬರುವುದಿಲ್ಲ. ಈ ರೀತಿಯ ಸಾಕ್ಷೀಭಾವದಲ್ಲಿ ಬದುಕುವುದು ಸಾಧ್ಯವಿದೆ."

ಗುರೂಜಿಯವರು ಹೇಳಿದ್ದನ್ನೇ ನಾನು ಮತ್ತೊಮ್ಮೆ ಹೇಳಿದ್ದೇನೆ, ಏಕೆಂದರೆ ಈ ವಿಷಯದ ಮೇಲೊಂದು ಪ್ರಶ್ನೆಯಿದೆ. ಯೋಗಿಯಂತೆ ಬದುಕುವುದು ಹೇಗೆ? ದೇಹ, ಮನಸ್ಸು ಮತ್ತು ಬುದ್ಧಿಗಳ ಮಟ್ಟಗಳಿಗಿಂತ ಮೇಲೆ ನಮ್ಮ ಅರಿವನ್ನು ಇರಿಸಿಕೊಳ್ಳಬೇಕು, ಆದರೆ ಹೇಗೆ? ಯೋಗಿಯೊಬ್ಬರ ದೃಷ್ಟಿಕೋನದಿಂದ ಮಾತನಾಡುವ ಅಧಿಕಾರ ನನಗಿಲ್ಲ. ಅದಕ್ಕೆ, ಮೊದಲಿಗೆ ನಾನು ಯೋಗಿಯಾಗಬೇಕು. ನಾನು ಮತ್ತು ನಾವೆಲ್ಲರೂ ಯೋಗಿಯಾಗಲು ಪ್ರಯತ್ನಿಸುತ್ತಿದ್ದೇವೆ. ಆದರೆ ಹಾಗೆ ಆಗುವುದಕ್ಕೆ ಮೊದಲು, ಅಂದರೆ ನಾವು ಸತ್ಯವೇ ಆಗುವುದಕ್ಕೆ ಮೊದಲು ಸತ್ಯವನ್ನು ಅರ್ಥಮಾಡಿಕೊಳ್ಳಲೂಬೇಕು. ನಾವೇನನ್ನಾದರೂ ಅರ್ಥಮಾಡಿಕೊಳ್ಳಲು ಬುದ್ಧಿಯ ಸಹಾಯ ಪಡೆಯುತ್ತೇವೆ ಮತ್ತು ನಮ್ಮ ಅಂತರಾಳದ ಮತ್ತಾವುದೋ ಒಂದರಿಂದಲೂ ಸಹಾಯ ಪಡೆಯುತ್ತೇವೆಂದು ನಾನು ನಂಬಿದ್ದೇನೆ. ಆಧ್ಯಾತ್ಮಿಕ ಬುದ್ಧಿಶಕ್ತಿಯ ಬಗ್ಗೆ ಗುರೂಜಿಯವರು ಮಾತನಾಡುತ್ತಿದ್ದರು. ವಿಷಯವೊಂದನ್ನು ಸರಿಯಾಗಿ, ಸಂಪೂರ್ಣವಾಗಿ ಗ್ರಹಿಸಲು ಅದು ಸಹಾಯಮಾಡುತ್ತದೆಂದು ನಾನು ಭಾವಿಸುತ್ತೇನೆ.

ದೇಹ, ಮನಸ್ಸು ಮತ್ತು ಬುದ್ಧಿಗಳಿಗೂ ಮೇಲೆ ನಮ್ಮ ಅರಿವನ್ನು ಇರಿಸಿಕೊಳ್ಳುವುದು ನಮಗೆ ಸಾಧ್ಯವೆಂದು ಗುರೂಜಿಯವರು ಹೇಳಿದಾಗ ಅದರ ಅರ್ಥ ನಾವು ದೇವರ ಇರುವಿಕೆಯ ಅರಿವಿನಲ್ಲಿರುವುದಾಗಿರಬಹುದು ಎಂದು ನಾನು ಭಾವಿಸುತ್ತೇನೆ. ಕೆಲಸವೊಂದರಲ್ಲಿ ನಾವು ತೊಡಗಿಕೊಂಡಿದ್ದಾಗ ನಮ್ಮ ಅರಿವನ್ನು ಆ ಕೆಲಸದ ಮೇಲಿರಿಸಬೇಕು ಮತ್ತು ಜೊತೆ ಜೊತೆಗೇ ನಾವು ದೇವರ ಇರುವಿಕೆಯ ಅರಿವಿನಲ್ಲೂ ಇರುತ್ತೇವೆ. ಗುರೂಜಿಯವರು ಕೊಟ್ಟ ಉದಾಹರಣೆಯೊಂದು ನನಗೆ ನೆನಪಿದೆ. ಅವರು ಹೇಳಿದರು, ನಾವು ಮನೆಯಲ್ಲಿದ್ದಾಗ, ಹಿರಿಯರು, ನಮ್ಮ ತಂದೆ ತಾಯಿಗಳು ಅಥವ ಅಜ್ಜಿ ತಾತಂದಿರು ಮನೆಯಲ್ಲಿರಬಹುದು. ಅವರು ಬೇರೊಂದು ಕೊಠಡಿಯಲ್ಲಿರಬಹುದು. ಅವರನ್ನು ನಾವು ಎಲ್ಲ ಸಮಯದಲ್ಲೂ ನೋಡಲು ಸಾಧ್ಯವಿರುವುದಿಲ್ಲ. ಮನೆಯ ಇನ್ನೊಂದು ಭಾಗದಲ್ಲಿ ಏನನ್ನಾದರೂ ಮಾಡುವುದರಲ್ಲಿ ನಾವು ತೊಡಗಿರುತ್ತೇವೆ. ನಮ್ಮ ಕೆಲಸದಲ್ಲಿ ನಾವು ತೊಡಗಿಕೊಂಡಿದ್ದರೂ, ಕೊಠಡಿಯಲ್ಲಿ ತಾತ ಇರುವುದು ನಮ್ಮ ಮನಸ್ಸಿನ ಹಿಂಭಾಗದಲ್ಲಿ ತಿಳಿದಿರುತ್ತದೆ. ಬಹುಶಃ ಅದೇ ರೀತಿಯಲ್ಲಿ ನಾವು ಏನನ್ನಾದರೂ ಮಾಡುತ್ತಿದ್ದಾಗ ದೇವರ ಇರುವಿಕೆಯನ್ನೂ ನೆನೆಯುತ್ತಿರಬೇಕು. ದೇವರಿದ್ದಾನೆ, ಅವನು ನನ್ನನ್ನು ಗಮನಿಸುತ್ತಿದ್ದಾನೆ – ತುಲನೆ ಮಾಡುವುದಕ್ಕೆ ಅಥವ ಶಿಕ್ಷಿಸುವುದಕ್ಕೆ ಅಲ್ಲ, ಆದರೆ ಸಹಾಯ ಮಾಡುವುದಕ್ಕೆ ಮಾತ್ರ. ಆ ರೀತಿಯಲ್ಲಿ ನಾವು ದೇವರ ಇರುವಿಕೆಯ ಅರಿವಿನಲ್ಲಿದ್ದಾಗ, ನಾವು ಯಾವಾಗಲೂ ಸರಿಯಾದುದನ್ನೇ ಮಾಡುತ್ತೇವೆ. ನಮ್ಮ ಭಾವನೆಗಳು ಮತ್ತು ನಮ್ಮ ಆಲೋಚನೆಗಳು ಸಕಾರಾತ್ಮಕವಾಗಿರುತ್ತವೆ. ನಮ್ಮ ಉದ್ದೇಶ ಎಷ್ಟೊಂದು ಶುದ್ಧ, ಉದಾತ್ತ ಮತ್ತು ನಿಸ್ವಾರ್ಥವಾಗಿರುತ್ತದೆಂದರೆ ನಾವು ಮಾಡುತ್ತಿರುವ ಕಾರ್ಯಗಳಿಗೆ ಕರ್ಮವಿರುವುದಿಲ್ಲ.

ದೇವರ ಇರುವಿಕೆಯ ಅರಿವಿನಲ್ಲಿ ನಾವಿದ್ದಾಗ ನಮ್ಮ ಶಕ್ತ್ಯಾನುಸಾರವಾಗಿ ಎಲ್ಲವನ್ನೂ ಸರಿಯಾಗಿ, ಪ್ರೀತಿಪೂರ್ಣವಾಗಿ ಮಾಡಲು ಪ್ರಯತ್ನಿಸುತ್ತೇವೆ. ಅದು ನಮ್ಮ ಕೆಲಸವನ್ನು ಜನರು ಗಮನಿಸಲಿ ಅಥವ ಮೆಚ್ಚಲಿ ಎನ್ನುವುದಕ್ಕಾಗಿ ಅಲ್ಲ, ಆದರೆ ದೇವರ ಕೆಲಸದಲ್ಲಿ ನಾವು ತೊಡಗಿಕೊಂಡಿದ್ದೇವೆ ಎಂಬ ಅರಿವಿನಿಂದಾಗಿ. ಆ ಅರಿವಿನಲ್ಲಿ ನಾವು ಕೆಲಸಮಾಡುತ್ತಿದ್ದಾಗ, ದೇವರು ನಮ್ಮ ಮೂಲಕ ಕೆಲಸ ಮಾಡಲು ಪ್ರಾರಂಭಿಸುತ್ತಾನೆ. ನಾವು ದೇವರ ಚಾನಲ್ ಆಗುತ್ತೇವೆ. ಬಹುಶಃ ನಾವು ಯೋಗಿ ಆಗುವುದು ಹಾಗೆಯೇ ಇರಬಹುದು. ಇದು ಸಾಧ್ಯವೆಂದು ನಾನು ತಿಳಿಯುತ್ತೇನೆ. ಇಲ್ಲಿ ನಾವೆಲ್ಲರೂ ಅದನ್ನೇ ಮಾಡಲು ಪ್ರಯತ್ನಿಸುತ್ತಿರುವುದು. ಅದಕ್ಕಾಗಿಯೇ ನಾವಿಲ್ಲಿದ್ದೇವೆ.

ನಮ್ಮ ಧ್ಯಾನದ ಗುಣಮಟ್ಟವನ್ನು ಉತ್ತಮಪಡಿಸುವುದು ಹೇಗೆ? ಧ್ಯಾನಮಾಡುವಾಗ ನಾವು ತಂತ್ರವನ್ನಷ್ಟೇ ಅಭ್ಯಾಸಮಾಡಿ ಉನ್ನತ ಶಕ್ತಿಯ ಅನುಗ್ರಹಕ್ಕಾಗಿ ಕಾಯಬೇಕೆಂದು ನಾವು ಅರ್ಥಮಾಡಿಕೊಂಡಿದ್ದೇವೆ. ಆದರೆ, ನಾವು ಮತ್ತೊಂದನ್ನು ಮಾಡಬಹುದು, ಪ್ರೀತಿಯನ್ನು ಸೇರಿಸಿ ತಂತ್ರವನ್ನು ಅಭ್ಯಾಸಮಾಡಬಹುದು. ಇದನ್ನೇ ಗುರೂಜಿಯವರು ಯಾವಾಗಲೂ ಹೇಳುತ್ತಿದ್ದರು. ಧ್ಯಾನದಲ್ಲಿ ನಾವು ದೇವರನ್ನು ಭೇಟಿಮಾಡಲು ಪ್ರಯತ್ನಿಸುತ್ತಿರುತ್ತೇವೆ. ಅವನನ್ನು ಭೇಟಿಮಾಡಲು ಮತ್ತು ಅವನನ್ನು ಅನುಭವಿಸಲು ಪ್ರಯತ್ನಿಸುತ್ತಿರುತ್ತೇವೆ. ನಮ್ಮಲ್ಲಿ ಆ ಪ್ರೀತಿಯ ತೀವ್ರತೆ, ಅವನನ್ನು ಭೇಟಿ ಮಾಡುವ ಹಂಬಲ ಇದ್ದರೆ, ಆಗ ಅದು ಧ್ಯಾನದ ಗುಣಮಟ್ಟವನ್ನು ಹೆಚ್ಚಿಸಲು ಸಹಾಯಮಾಡಬಹುದು. ನಾವು ಧ್ಯಾನಮಾಡದಿರುವ ಸಮಯದಲ್ಲಿ, ಅಂದರೆ ಬದುಕಿನಲ್ಲಿ ತೊಡಗಿರುವಾಗ ಹೆಚ್ಚು ಸಕಾರಾತ್ಮಕರಾಗಬೇಕು, ಹೆಚ್ಚು ಅಭಿವ್ಯಕ್ತಿಸಬೇಕು. ಪ್ರೀತಿ ಮತ್ತು ಸಕಾರಾತ್ಮಕತೆಯನ್ನು ಹೆಚ್ಚಾಗಿ ಅಭಿವ್ಯಕ್ತಿಸಬೇಕು. ಪ್ರತಿಯಾಗಿ, ಅದು ಧ್ಯಾನಕ್ಕೆ ಸಹಾಯಮಾಡುತ್ತದೆ.

ನಾವು ನಮ್ಮ ಧ್ಯಾನದ ಗುಣಮಟ್ಟವನ್ನು ಹೇಗೆ ತಿಳಿಯಬಹುದು? ನಮ್ಮ ಧ್ಯಾನ ಚೆನ್ನಾಗಿದ್ದಾಗ ನಮಗೆ ತಿಳಿಯುತ್ತದೆ. ಧ್ಯಾನದಲ್ಲಿ ಎಷ್ಟರ ಮಟ್ಟಿಗೆ ದೇವರನ್ನು ಅನುಭವಿಸಿದೆವು ಎನ್ನುವುದರ ಮೇಲೆ ಅದನ್ನು ನಿರ್ಧರಿಸಬಹುದು. ದೇವರನ್ನು ಅನುಭವಿಸಿದಾಗ, ಸಹಜವಾಗಿಯೇ ನಾವು ಅಪಾರ ಶಾಂತಿಯನ್ನು ಅನುಭವಿಸುತ್ತೇವೆ. ಎಷ್ಟು ಪ್ರೀತಿ, ಎಷ್ಟು ವಿಸ್ತರಣೆ, ಎಷ್ಟು ಸಕಾರಾತ್ಮಕವಾದದ್ದೆಲ್ಲವನ್ನು ನಾವು ಅನುಭವಿಸುತ್ತೇವೆ ಎನ್ನುವುದನ್ನು ಅಳೆಯಬಹುದು. ಅದು ಧ್ಯಾನದ ಗುಣಮಟ್ಟವನ್ನು ನಿರ್ಧರಿಸುತ್ತದೆ. ನಿಶ್ಚಲತೆಯ ಅನುಭವ ನಮಗಾಯಿತೆ? ನಿಶ್ಚಲತೆಯಲ್ಲಿ ನಾವು ದೇವರನ್ನು ಅನುಭವಿಸುತ್ತೇವೆ. ಧ್ಯಾನದ ಗುಣಮಟ್ಟವು ತಂತ್ರದ ಅಭ್ಯಾಸವನ್ನು ಮಾತ್ರ ಅವಲಂಬಿಸಿರುವುದಿಲ್ಲ. ಅದರ ಜೊತೆಗೆ ಬೇರೆ ಸಮಯಗಳಲ್ಲಿ ನಾವು ಹೇಗೆ ಬದುಕುತ್ತೇವೆ ಎನ್ನುವುದನ್ನೂ ಅದು ಅವಲಂಬಿಸಿರುತ್ತದೆ. ಅದು ಬಹು ಮುಖ್ಯವೆಂದು ನಾನು ಭಾವಿಸುತ್ತೇನೆ. ಅನುಭವದ ಉತ್ತುಂಗ ಅವಧಿಯೆಂದರೆ ಧ್ಯಾನ. ಆದರೆ, ಇಪ್ಪತ್ತನಾಲ್ಕೂ ಗಂಟೆಗಳ ಅಭ್ಯಾಸವೇ ಸಾಧನೆ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರು – ವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲೀಷ್‌ನಲ್ಲಿ (ವರ್ಷಕ್ಕೆ ರೂ. 2500), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1300) ಪಾಠಗಳನ್ನು ಕಳುಹಿಸಲಾಗುವುದು. ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ವಾರ್ಷಿಕ ರಿಜಿಸ್ಟ್ರೇಶನ್ ಫ್ಲೀಯು ರೂ. 4500. ಈ ಫ್ಲೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಮತ್ತು ಪಠ್ಯಪುಸ್ತಕಗಳು ಸೇರಿದೆ.

ನಂತರ, ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ್ಲೀ ಇಂಗ್ಲೀಷ್ (ವರ್ಷಕ್ಕೆ ರೂ. 2000), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 900). ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ್ಲೀಯು ರೂ. 3500. ಈ ಫ್ಲೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಸೇರಿದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

08–10–2017

ಅಮೆರಿಕದಲ್ಲಿ ಒಬ್ಬ ವ್ಯಕ್ತಿಯು ಅನೇಕ ಜನರನ್ನು ಗುಂಡಿಕ್ಕಿ ಕೊಂದಿದ್ದನ್ನು ನೀವೆಲ್ಲರೂ ಟಿವಿಯಲ್ಲಿ ನೋಡಿರಬೇಕು. ಟೆಕ್ಸಾಸ್‌ನಲ್ಲಿನ ಪ್ರವಾಹ ಮತ್ತು ಪ್ರವಾಹದಲ್ಲಿ ತೊಂದರೆಗೀಡಾದ ಜನರಿಗೆ ಅಮೆರಿಕಾದ ಜನತೆ ಹೇಗೆ ಸಹಾಯ ಮಾಡಿದರು ಎಂಬ ಬಗ್ಗೆ ಹಿಂದಿನ ತರಗತಿಯಲ್ಲಿ ನಾನು ಪ್ರಸ್ತಾಪಿಸಿದ್ದೆ. ಅದರಲ್ಲಿ ಎಷ್ಟೊಂದು ಕಾಳಜಿಯಿತ್ತು, ಬದುಕಿಗೆ ಎಷ್ಟೊಂದು ಬೆಲೆಯಿತ್ತು. ಸಾವಿರಾರು ಜನರನ್ನು ಬದುಕಿಸಲಾಯಿತು. ಒಂದು ಕಡೆ ಮಾನವನ ಬದುಕಿಗೆ ಬೆಲೆ ಕೊಟ್ಟಿದ್ದನ್ನು ಮತ್ತು ಕಾಳಜಿ ವಹಿಸಿದ್ದನ್ನು ನಾವು ನೋಡಿದೆವು ಆದರೆ ಮತ್ತೊಂದು ಘಟನೆಯಲ್ಲಿ ಮುಗ್ಧ ಜನರನ್ನು ಕೊಲ್ಲುವ ಭೀಕರ ಕೆಲಸವನ್ನೂ ನೋಡಿದೆವು. ಆ ರೀತಿಯ ಘಟನೆಗಳು ಅನೇಕವಿವೆ. ಪೋರ್ಟೋ ರಿಕೋದಲ್ಲಾದ ಪ್ರವಾಹದ ಬಗ್ಗೆಯೂ ನೀವು ಓದಿರಬಹುದು. ಚಂಡಮಾರುತದಿಂದಾಗಿ ಅದು ಧ್ವಂಸವಾಯಿತು. ಅಲ್ಲಿನ ಲಕ್ಷಾಂತರ ಜನರು ವಿದ್ಯುತ್ ಇಲ್ಲದೆ, ಕುಡಿಯುವ ನೀರಿಲ್ಲದೆ ಅನೇಕ ದಿನಗಳನ್ನು ಕಳೆದರು. ಆಶ್ಚರ್ಯದ ವಿಷಯವೆಂದರೆ, ಅಮೆರಿಕದ ಅಧಿಕಾರಿಗಳಿಂದ ತಮಗೆ ಸಹಾಯ ಅಥವ ಸರಿಯಾದ ಬೆಂಬಲ ಸಿಗಲಿಲ್ಲವೆಂದು ಅಲ್ಲಿನ ಜನರು ದೂರಿದ್ದಾರೆ. ಟೆಕ್ಸಾಸ್‌ನಲ್ಲಾಗಿದ್ದು ಸಂಪೂರ್ಣವಾಗಿ ಬೇರೆಯಾಗಿದ್ದರೆ ಪೋರ್ಟೋ ರಿಕೋದಲ್ಲಾದದ್ದೇ ಬೇರೆ. ಬದುಕು ಇಂತಹ ವೈರುಧ್ಯ ವಿಷಯಗಳಿಂದ ತುಂಬಿದೆ.

ವಿಶ್ವದ ಮತ್ತೊಂದು ಭಾಗದಲ್ಲಿ, ಮಿಲಿಯಾಂತರ ಜನರನ್ನು ಅವರ ದೇಶದಿಂದ ಹೊರಗಟ್ಟುತ್ತಿರುವುದನ್ನು ನಾವು ನೋಡಿದೆವು. ಅವರ ಮನೆಗಳನ್ನು ಸುಡಲಾಯಿತು, ಅನೇಕರನ್ನು ಕೊಂದರು ಮತ್ತು ಲಕ್ಷಾಂತರ ಜನರನ್ನು ಅವರ ಮನೆ ಮತ್ತು ದೇಶವನ್ನು ತೊರೆದು ಮತ್ತೊಂದು ದೇಶಕ್ಕೆ ಹೋಗಲು ಬಲಾತ್ಕರಿಸಲಾಯಿತು. ಮೊದಲಿಗೆ ಅವರು ಬದುಕಿ ಉಳಿಯುವುದರ ಬಗ್ಗೆ ಚಿಂತೆಮಾಡಬೇಕಿದೆ, ನಂತರವಷ್ಟೇ ಘನತೆಯ ಬದುಕಿನ ಬಗ್ಗೆ ಅವರಿಗೆ ಯೋಚಿಸಲು ಸಾಧ್ಯ. ಅದಕ್ಕೆ ಬಹಳ ಸಮಯ ಬೇಕಾಗುತ್ತದೆ. ಸ್ಪೇನ್ ಮತ್ತು ಇರಾಕ್‌ನ ಕೆಲವು ಭಾಗಗಳಲ್ಲಿ ಜನರು ಸ್ವಾತಂತ್ರ್ಯಕ್ಕಾಗಿ ದಂಗೆ ಏಳುವ ಅಂಚಿನಲ್ಲಿರುವುದನ್ನು ನೀವು ನೋಡಿರಬಹುದು. ದೇಶಗಳನ್ನು ಪ್ರತ್ಯೇಕ ಭಾಗಗಳಾಗಿ ಒಡೆಯುವುದು ಅವರಿಗೆ ಬೇಕಿದೆ! ನಮ್ಮದೇ ದೇಶದಲ್ಲೂ ಪ್ರವಾಹಗಳಿಂದಾಗಿ ಸಾವಿರಾರು ಜನರು ಸಾವನ್ನಪ್ಪಿದ್ದಾರೆ. ಭ್ರಷ್ಟಾಚಾರ ಮತ್ತು ಅನ್ಯಾಯ ನಮ್ಮ ದಿನ ನಿತ್ಯದ ಜೀವನದಲ್ಲಿ ಎದುರಾಗುತ್ತವೆ.

ಇದೆಲ್ಲವೂ ನಮ್ಮನ್ನು ಹೊಸ ಯುಗಕ್ಕೆ ಕೊಂಡೊಯ್ಯುತ್ತದೆಯೇ ಎಂದು ಯಾರೇ ಆದರೂ ಸಹಜವಾಗಿಯೇ ಆಶ್ಚರ್ಯ ಪಡಬಹುದು. ಇದು ಪರಿವರ್ತನಾ ಕಾಲವೆಂದು ನಮಗೆಲ್ಲ ತಿಳಿದಿದೆ, ಅವ್ಯವಸ್ಥೆ ಎಲ್ಲೆಲ್ಲೂ ತುಂಬಿರುವುದನ್ನು ನೋಡುತ್ತೇವೆ. ಯಾವುದೇ ಪರಿವರ್ತನೆಯು ಸರಾಗವಾಗಿ ಆಗಬಹುದು ಅಥವ ಅವ್ಯವಸ್ಥೆಯ ಗೊಂದಲದಿಂದ ಕೂಡಿರಬಹುದು. ಅದು ಪರಿವರ್ತನೆಯ ಪ್ರಕ್ರಿಯೆಯಲ್ಲಿ ತೊಡಗಿಕೊಂಡಿರುವ ಜನರನ್ನು ಅವಲಂಬಿಸಿದೆ. ಜನರು ಬದಲಾವಣೆಯನ್ನು ವಿರೋಧಿಸದಿದ್ದರೆ, ಆಧ್ಯಾತ್ಮಿಕ ಮಾಸ್ಟರ್‌ಗಳು ಹರಡುತ್ತಿರುವ ಹೊಸ ಚೈತನ್ಯಗಳನ್ನು ಅವರು ಸ್ವೀಕರಿಸಿದರೆ, ಈ ನೋವು ಮತ್ತು ಗೊಂದಲವನ್ನು ತಪ್ಪಿಸಬಹುದು. ಚಂಡ ಮಾರುತಗಳನ್ನು ಕೂಡ ತಪ್ಪಿಸಬಹುದು ಎಂದು ನಾನು ಅರ್ಥಮಾಡಿಕೊಂಡಿದ್ದೇನೆ. ಜನರು ಹೊಸ ಚೈತನ್ಯಗಳನ್ನು ಸ್ವೀಕರಿಸಿದರೆ ಈ ಚೈತನ್ಯಗಳು ಅವರಿಗೆ ಈ ಪರಿವರ್ತನೆಯ ಅವಧಿಯನ್ನು ಶಾಂತಿಯುತವಾಗಿ ದಾಟಲು ಮಾರ್ಗದರ್ಶನ ನೀಡುತ್ತದೆ.

ಈ ಭೂಮಿಯು ಕತ್ತಲಿನ ಯುಗದಿಂದ ಬೆಳಕಿನ ಯುಗಕ್ಕೆ ಸ್ಥಿತ್ಯಂತರ ಹೊಂದಿರುವುದನ್ನು ಋಷಿಗಳು ಅನೇಕ ಬಾರಿ ನೋಡಿದ್ದಾರೆಂದು ಗುರೂಜಿಯವರು ಹೇಳುತ್ತಿದ್ದರು. ಅದು ಈ ಮನ್ವಂತರದಲ್ಲೇ 28 ಬಾರಿ ಆಗಿರುವುದನ್ನು ಅವರು ನೋಡಿದ್ದಾರೆ. ಈ ಪರಿವರ್ತನೆಯ ಕಾಲ ತಾತ್ಕಾಲಿಕವಾದದ್ದು. ನಾವು ಕಾಣುತ್ತಿರುವ ನೋವು ಮತ್ತು ಕಷ್ಟಗಳು ಮತ್ತು ಗೊಂದಲಗಳೆಲ್ಲವೂ ತಾತ್ಕಾಲಿಕ. ಈ ಗೊಂದಲದ ಮಧ್ಯದಲ್ಲೇ ಹೊಸ ವ್ಯವಸ್ಥೆಯು ಹುಟ್ಟುತ್ತದೆ ಹಾಗೂ ಹೊಸ ಯುಗದೆಡೆಗೆ ನಾವು ದಾಪುಕಾಲು ಹಾಕುತ್ತೇವೆಂದು ನಮಗಿಲ್ಲಿ ತಿಳಿದಿದೆ. ಈ ನೋವನ್ನು ತಪ್ಪಿಸಬಹುದು. ಬಹುಪಾಲು ಜನರು ಹೊಸ ಚೈತನ್ಯಗಳನ್ನು ಸ್ವೀಕರಿಸಿದರೆ ದುಷ್ಟ ಶಕ್ತಿಗಳು ದುರ್ಬಲವಾಗುತ್ತವೆ. ಈ ದುರ್ಬಲ ದುಷ್ಟ ಶಕ್ತಿಗಳು ಹೆಚ್ಚು ನೋವು ಮತ್ತು ಕಷ್ಟಗಳನ್ನುಂಟುಮಾಡಲಾರವು. ಈ ಸಮಯದಲ್ಲಿ ಅವು ದುರ್ಬಲಗೊಂಡಿದ್ದರೂ, ಇನ್ನೂ ಕಾರ್ಯನಿರ್ವಹಿಸುತ್ತಿವೆ. ಈ ಭೂಮಿಯ ಭವಿಷ್ಯ ಋಷಿಗಳಿಗೆ ತಿಳಿದಿದೆ. ಪರಿವರ್ತನೆ ಸುಸೂತ್ರವಾಗಿ ಆಗಲಿ ಎನ್ನುವುದಕ್ಕಾಗಿ ಅವರು ಪ್ರಯತ್ನಿಸುತ್ತಿದ್ದಾರೆ. ಆ ಕಾರಣಕ್ಕಾಗಿಯೇ ಇಷ್ಟೊಂದು ಜ್ಞಾನ ಮತ್ತು ಚೈತನ್ಯಗಳನ್ನು ಹರಡುತ್ತಿದ್ದಾರೆ, ಇಷ್ಟೊಂದು ಸಹಾಯ ಮಾಡುತ್ತಿದ್ದಾರೆ. ಈ ಕಾಲ ತಾತ್ಕಾಲಿಕ, ಅದು ಬೇಗ ಕಳೆದುಹೋಗುತ್ತದೆ. ■

## ಪ್ರಶ್ನೆಗಳು ಮತ್ತು ಉತ್ತರಗಳು

ಸಂ: ಶೋಭಾ ಕೆ. ರಾವ್; ಅನು: ಪಾಂಡುರಂಗ

**ಪ್ರಶ್ನೆ: ಪಿರಮಿಡ್‌ಗೆ ಇರುವ ತಲೆಕೆಳಗಾದ ಸೂಕ್ಷ್ಮ ಮಟ್ಟದ ಪ್ರತಿರೂಪದ ಉದ್ದೇಶವೇನು?**

ಉ: ಋಷಿಗಳು ಬಹಿರಂಗ ಪಡಿಸಿರುವಂತೆ, ಭೌತಿಕ ಮಟ್ಟದಲ್ಲಿ ಪಿರಮಿಡ್ ನಿರ್ಮಾಣ ಮಾಡಿದಾಗಲೆಲ್ಲಾ, ಈ ಭೌತಿಕ ಪಿರಮಿಡ್‌ನ ಮೇಲೆ ಮತ್ತು ಕೆಳಗೆ ಒಂದೊಂದು ತಲೆಕೆಳಗಾದ ಪಿರಮಿಡ್ ಸೂಕ್ಷ್ಮಮಟ್ಟದಲ್ಲಿ ಅಸ್ತಿತ್ವಕ್ಕೆ ಬಂದಿರುತ್ತದೆ. ಇವುಗಳ ಉದ್ದೇಶಗಳು ಸ್ವಲ್ಪ ಮಟ್ಟಿಗೆ ಮಾತ್ರ ನಮಗೆ ತಿಳಿದಿದೆ. ಬೇರೆ ಬೇರೆ ಲೋಕಗಳಿಂದ ಚೈತನ್ಯಗಳನ್ನು ಸಂಗ್ರಹಿಸುವುದು ಇದರ ಉದ್ದೇಶವಾಗಿದೆ. ಈ ಪಿರಮಿಡ್‌ಗಳು ದೈವೀ ಮತ್ತು ಭೌತಿಕ ಬ್ರಹ್ಮಾಂಡಗಳನ್ನು ಪ್ರತಿನಿಧಿಸುತ್ತವೆ. ಮೊದಲ ಅಥವಾ ಮೇಲಿನ ಸೂಕ್ಷ್ಮಮಟ್ಟದ ತಲೆ ಕೆಳಗಾದ ಪಿರಮಿಡ್‌ನಲ್ಲಿ ನಾಲ್ಕು ದೈವೀ ಲೋಕಗಳ ಚೈತನ್ಯಗಳನ್ನು ಸಂಗ್ರಹಿಸಿಡಲಾಗುತ್ತದೆ. ಕೆಳಗಿನ ಸೂಕ್ಷ್ಮ ಮಟ್ಟದ ತಲೆಕೆಳಗಾದ ಪಿರಮಿಡ್‌ನಲ್ಲಿ ಪಾತಾಳ ಲೋಕಗಳ ಚೈತನ್ಯಗಳನ್ನು ಸಂಗ್ರಹಿಸಿಡಲಾಗುತ್ತದೆ. ಈ ಪಾತಾಳ ಲೋಕಗಳ ಬಗ್ಗೆ ನಾವು ಇನ್ನೂ ಹೆಚ್ಚು ತಿಳಿದುಕೊಳ್ಳಬೇಕಾಗಿದೆ.

**ಪ್ರ: ಮೆಕ್ಸಿಕೋದ ಪಿರಮಿಡ್‌ಗಳನ್ನು ಯಾವಾಗ ನಿರ್ಮಾಣ ಮಾಡಲಾಗಿದೆ?**

ಉ: ಸಾವಿರಾರು ವರ್ಷಗಳ ಹಿಂದೆಯೇ ಮಾಯನ್ ಜನರು ಪಿರಮಿಡ್‌ಗಳನ್ನು ನಿರ್ಮಾಣ ಮಾಡಿದರು. ಸೂರ್ಯನ ಒಳಗೆ ಬೃಹತ್ತಾದ ಆಕಾಶ ಮತ್ತು ಅನೇಕ ಭೂಮಿಗಳು ಇವೆ. ಸೂರ್ಯನ ಒಳಗೆ ಇರುವ ಭೂಮಿಗಳಲ್ಲಿ ವಾಸ ಮಾಡುತ್ತಿರುವ ಅನೇಕ ಜನರು, ಪ್ರಗತಿ ಪರ ಆತ್ಮಗಳು ಸಿರಿಯಸ್ ಮಹಾನಕ್ಷತ್ರದಿಂದ ಬಹಳಷ್ಟು ಜ್ಞಾನವನ್ನು ಮತ್ತು ಚೈತನ್ಯಗಳನ್ನು ಪಡೆದಿದ್ದಾರೆ. ಸಿರಿಯಸ್‌ನಿಂದ ಪಿರಮಿಡ್‌ಗಳ ಜ್ಞಾನ ನಮಗೆ ಸಿಕ್ಕಿದೆ. ಮಾಯನ್ ಜನರು ಈ ಭೂಮಿಗೆ ಬಂದಾಗ ಪಿರಮಿಡ್‌ಗಳನ್ನು ನಿರ್ಮಾಣ ಮಾಡಿದರು ನಂತರ ಸೂರ್ಯ ಲೋಕಕ್ಕೆ ಹಿಂದಿರುಗಿದರು.

**ಪ್ರ: ಋಷಿಗಳು ಮತ್ತು ಅವತಾರ, ಇವರುಗಳು ಪರಿವರ್ತನಾ ಕಾಲದ ಕೆಲಸಗಳನ್ನು ಎಷ್ಟು ಪ್ರಮಾಣದಲ್ಲಿ ವಹಿಸಿಕೊಂಡಿದ್ದಾರೆ?**

ಉ: ಅವತಾರರ ಮೇಲ್ವಿಚಾರಣೆಯಲ್ಲಿ ಎಲ್ಲ ಕೆಲಸಗಳನ್ನೂ ಮಾಡಲಾಗುತ್ತಿದೆ. ಅವತಾರ ಎಲ್ಲ ಕೆಲಸವನ್ನೂ ಮಾಡುವುದಿಲ್ಲ. ಅವರು ಮಾಡಬೇಕಿಲ್ಲ. ಆದರೂ ಅವತಾರ ತಾವಾಗಿಯೇ ಕೆಲವು ಮುಖ್ಯ ಕೆಲಸಗಳನ್ನು ಮಾಡುತ್ತಾರೆ.

**ಪ್ರ: ನೈಸರ್ಗಿಕ ವಿಕೋಪಗಳ ಸಮಯದಲ್ಲಿ ಯಾವ ಚೈತನ್ಯಗಳನ್ನು ಬಿಡುಗಡೆ ಮಾಡಲಾಗುತ್ತದೆ?**

ಉ: ನೈಸರ್ಗಿಕ ವಿಕೋಪಗಳ ಸಮಯದಲ್ಲಿ ವಿನಾಶಕಾರಿ ಚೈತನ್ಯಗಳ ಜೊತೆಗೆ ಸೃಷ್ಟಿಯ ಚೈತನ್ಯಗಳು ಮತ್ತು ಶುದ್ಧೀಕರಣದ ಚೈತನ್ಯಗಳು ಬಿಡುಗಡೆಯಾಗುತ್ತವೆ. ಈ ಚೈತನ್ಯಗಳು ಪರಿಶುದ್ಧಗೊಳಿಸುತ್ತವೆ. ಕೆಲವು ಬೇರೆ ರೀತಿಯ ಚೈತನ್ಯಗಳು ಸಹ ಬಿಡುಗಡೆಯಾಗುತ್ತವೆ. ಋಷಿಗಳಿಗೆ ಇವೆಲ್ಲವುದರಗಳ ಬಗ್ಗೆ ಗೊತ್ತಿರುತ್ತದೆ. ಆದ್ದರಿಂದ ನೈಸರ್ಗಿಕ ವಿಕೋಪ ಸಂಭವಿಸಿದಾಗ, ಋಷಿಗಳು ತಮ್ಮದೇ ಆದ ರೀತಿಯಲ್ಲಿ ಕಷ್ಟಗಳನ್ನು ಎದುರಿಸುತ್ತಿರುವ ಜನರಿಗೆ ಸಹಾಯ ಮಾಡುತ್ತಾರೆ. ಮತ್ತು ಋಷಿಗಳು ಈ ಅಸಾಮಾನ್ಯ ಚೈತನ್ಯಗಳನ್ನು ಸಂಗ್ರಹಿಸಿಕೊಂಡು ಸೂಕ್ತ ಸಮಯದಲ್ಲಿ ಅವುಗಳನ್ನು ಬಳಸುತ್ತಾರೆ.

**ಪ್ರ: ಬದಲಾಗಲು ಪ್ರಕ್ಷುಬ್ಧತೆಯೊಂದೇ ಸಾಕೇ?**

ಉ: ಸಾಕಾಗುವುದಿಲ್ಲ. ಪ್ರಕ್ಷುಬ್ಧತೆ ಒಂದು ಅವಕಾಶ. ಇದನ್ನು ಸದುಪಯೋಗ ಪಡಿಸಿಕೊಂಡು ಬೆಳೆಯುವುದಕ್ಕೆ ಪ್ರಯತ್ನಿಸಬೇಕು. ಪ್ರಕ್ಷುಬ್ಧತೆ ನಮ್ಮೊಳಗೆ ಏಕೆ ಆವರಿಸಿಕೊಂಡಿದೆ ಎಂದು ಅರ್ಥ ಮಾಡಿಕೊಳ್ಳಬೇಕು. ವಿಶ್ಲೇಷಿಸಿ, ಅರ್ಥ ಮಾಡಿಕೊಂಡು ಬೆಳೆಯುವುದಕ್ಕೆ ಪ್ರಯತ್ನಿಸಬೇಕು. ಅರ್ಥ ಮಾಡಿಕೊಳ್ಳುವುದು ಬಹಳ ಮುಖ್ಯ. ಮೂಲ ಕಾರಣವನ್ನು ಹುಡುಕಬೇಕು. ನಾವು ಒಂದು ಸಲ ಅದನ್ನು ಅರ್ಥ ಮಾಡಿಕೊಂಡರೆ, ಅದರಿಂದ ಪಾಠ ಕಲಿಯಬಹುದು. ಈ ಪ್ರಕ್ಷುಬ್ಧತೆಗೆ ಅವಕಾಶಮಾಡಿಕೊಟ್ಟರೆ, ಪ್ರತಿಯೊಬ್ಬರ ಜೊತೆಗೂ ಜಗಳವಾಡುತ್ತಾ ನರಕಯಾತನೆ ಅನುಭವಿಸುತ್ತೇವೆ.

**ಪ್ರ: ಒಬ್ಬ ವ್ಯಕ್ತಿ ಮತ್ತೊಮ್ಮೆ ಹುಟ್ಟಿ ಬರದಿರುವ ಉತ್ಕಟ ಸಂಕಲ್ಪವನ್ನು ಹೊಂದಿದ್ದರೆ, ಆಗ ಏನಾಗುತ್ತದೆ?**

ಉ: ಕರ್ಮಗಳನ್ನು ತೀರಿಸುವವರೆಗೂ ಆತ ಜನ್ಮವೆತ್ತುತ್ತಲೇ ಇರಬೇಕು. ಸಂಕಲ್ಪ ಮುಖ್ಯ. ಬಲವಾದ ಸಂಕಲ್ಪ ಒಳ್ಳೆಯದು, ಆದರೆ ಅದರ ಹಿಂದೆ ಒಂದು ಒಳ್ಳೆಯ ಉದ್ದೇಶ ಇರಬೇಕು.

**ಪ್ರ: ನಾವು ಮತ್ತೊಮ್ಮೆ ಜನಿಸಿ ಬರುವುದಕ್ಕೆ ಇಷ್ಟ ಪಡದಿದ್ದಾಗ, ಈ ಜನ್ಮದಲ್ಲಿಯೇ ನಾವು ಕರ್ಮಗಳನ್ನು ತೀರಿಸಬೇಕೇ?**

ಉ: ಹೌದು.


**ಪ್ರ: ನಾವು ನಕಾರಾತ್ಮಕ ವ್ಯಕ್ತಿಗಳಿಗೆ ಬೆಳಕನ್ನು ಕಳಿಸಿದಾಗ, ಬೆಳಕು ಅವರನ್ನು ಪ್ರವೇಶಿಸುವುದೇ?**

ಉ: ಒಬ್ಬ ವ್ಯಕ್ತಿ ನಕಾರಾತ್ಮಕನಾಗಿರಲೀ ಅಥವಾ ಸಕಾರಾತ್ಮಕನಾಗಿರಲಿ, ಆತ ಅಥವಾ ಆಕೆ ಆ ಬೆಳಕಿಗೆ ಒಪ್ಪಿಗೆ ಸೂಚಿಸದಿದ್ದಲ್ಲಿ ಬೆಳಕು ಅವರನ್ನು ಪ್ರವೇಶಿಸುವುದಿಲ್ಲ. ಬೆಳಕಿಗೂ ವಿವೇಕವಿದೆ, ಅದು ವ್ಯಕ್ತಿಯ ಇಚ್ಛಾ ಸ್ವಾತಂತ್ರ್ಯವನ್ನು ಗೌರವಿಸುತ್ತದೆ. ■

## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| Master-Pupil Talks - Vol 2 | 75/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| Thus Spoke Guruji Krishnananda - Vol 1 | 200/- |
| Thus Spoke Guruji Krishnananda - Vol 2 | 250/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| प्रकाशवाट (Marathi) | 150/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्वांचा अभ्यास (Marathi) | 50/- |
| एका आधुनिक ऋषीचे | |
| सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 100/- |

Published: 21st of Every Month. RNI. No. KARKAN/2003/13739 Regd. Postal Regn. No. KARN/BGE/1124/ 2017-2019
Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8



ಗುರೂಜಿ ಕೃಷ್ಣಾನಂದ (1939 - 2012)

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ಬೃಂದಾವನಕ್ಕೆ ಸೂಕ್ಷ್ಮ ಪ್ರಯಾಣವಿದ್ದ ರಾತ್ರಿ, ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗಲು ಮತ್ತು ಅಲ್ಲಿನ ದಿವ್ಯ ಘಟನೆಯ ನೆನಪು ಉಳಿಯುವಂತೆ ಮಾಡಲು ಋಷಿಗಳನ್ನು ಪ್ರಾರ್ಥಿಸಿ ಮಲಗಿಕೊಂಡೆ. ಮಾರನೆಯ ದಿನ ದಿವ್ಯವಾದ ಸುಂದರ ಸಂಗೀತದ ಶಬ್ದದಿಂದ ಎಚ್ಚರವಾಯಿತು. ನನ್ನ ಕಣ್ಣುಗಳು ಅರ್ಧ ತೆರೆದಿದ್ದವು, ನನ್ನ ತಲೆ ಮತ್ತು ಬಲಗೈ ಸಂಗೀತದ ನಾದಕ್ಕೆ ತಕ್ಕಂತೆ ಆಡುತ್ತಿತ್ತು! ಇದು ಖಂಡಿತವಾಗಿಯೂ ಅಲ್ಲಿಯ ಪ್ರಯಾಣದ ನೆನಪಿನಿಂದ ನನಗೆ ಸಿಕ್ಕ ಆಶೀರ್ವಾದ.

– ವಿದ್ಯಾ ವೀರ್‌ಕರ್

ನನ್ನ ಧ್ಯಾನ ಕ್ರಮಬದ್ಧವಾಗಿಲ್ಲದಿದ್ದರೂ, ದೇವರ ಹಾಗೂ ಗುರೂಜಿಯವರ ಆಶೀರ್ವಾದದಿಂದ ಜೀವನದಲ್ಲಿ ಏನೇ ಬಂದರೂ ಶಾಂತವಾಗಿ ಎದುರಿಸುತ್ತೇನೆ. ನಾನು ದೇವರಲ್ಲಿ ಶರಣಾಗಿರುವುದರಿಂದ ಅವನೇ ಎಲ್ಲವನ್ನು ನೋಡಿಕೊಳ್ಳುವನೆಂಬ ನಂಬಿಕೆ ಇದೆ. ಅತ್ಯಂತ ಮಹಾನ್ ಶಕ್ತಿಯಾದ ದೇವರು, ಗುರೂಜಿಯವರ ಮತ್ತು ಋಷಿಗಳ ಮೂಲಕ ಕಾರ್ಯ ನಿರ್ವಹಿಸುತ್ತಿದ್ದಾನೆ. ಈ ಧ್ಯಾನಮಾರ್ಗದಲ್ಲಿರುವುದು ನನ್ನ ಅದೃಷ್ಟವೇ ಸರಿ.

– ಪ್ರತಿಮಾ ವಡಗಾಮ

ಕಳೆದ ತಿಂಗಳು ನನ್ನ ಮಗನಿಗೆ ಜ್ವರ ಜಾಸ್ತಿಯಾಗಿ ಅದು ಡೆಂಗು ಜ್ವರವೆಂದು ವೈದ್ಯರು ತೀರ್ಮಾನಿಸಿದ್ದರು. ಅವನು ಇನ್ನೆರಡು ದಿನಗಳಲ್ಲಿ ಅಮೆರಿಕಕ್ಕೆ ಹೋಗಬೇಕಿತ್ತು. ನಾನು ಗುರೂಜಿಯವರನ್ನು ಪ್ರಾರ್ಥಿಸಿದಾಗ ಅವನ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆ ಕಂಡು ಬಂದು ಅವನು ಅಮೆರಿಕಾಗೆ ಹೋಗಲು ಸಾಧ್ಯವಾಯಿತು! ಇಂತಹ ಅನೇಕ ಸಂದರ್ಭಗಳಲ್ಲಿ ಗುರೂಜಿಯವರ ಸಹಾಯ ನನಗೆ ದೊರೆತು ಎಲ್ಲವೂ ಸರಿಹೋಗಿವೆ. ಋಷಿಗಳು ಹಾಗೂ ಗುರೂಜಿಯವರ ರಕ್ಷಣಾ ಹಸ್ತ ನನ್ನ ಮೇಲಿರುವುದಕ್ಕೆ ನಾನು ಅತ್ಯಂತ ಋಣಿಯಾಗಿದ್ದೇನೆ.

– ಪಾಯಲ್ ವರ್ಮ

ಇತ್ತೀಚೆಗೆ ನನ್ನೆಲ್ಲ ತೊಂದರೆಗಳಿಗೂ ಶೀಘ್ರ ಪರಿಹಾರ ಸಿಗುತ್ತಿದೆ. ನನ್ನ ಪ್ರಾರ್ಥನೆಗಳಿಗೆ ತಕ್ಷಣವೇ ಉತ್ತರ ಸಿಗುತ್ತಿದೆಯೆಂದು ಭಾವಿಸುತ್ತೇನೆ. ನಾನೀಗ ತೃಪ್ತಳಾಗಿ ಅತ್ಯಂತ ಸಂತೋಷವಾಗಿದ್ದೇನೆ.

– ಪದ್ಮಜ ಬಾಜ್‌ಪೈ

ನಾನು ಧ್ಯಾನ ಮಾಡುವಾಗ ಋಷಿಗಳು ನನ್ನ ನೀಲಿ ರಕ್ಷಣಾ ಕವಚದೊಂದಿಗೆ ಬೆರೆಯುತ್ತಿರುವುದು ಕಾಣಿಸುತ್ತದೆ. ಅವರ ಪ್ರೀತಿ ನನ್ನನ್ನು ಸುತ್ತವರೆದಿರುತ್ತದೆ. ಅವಶ್ಯಕತೆ ಇರುವವರಿಗೆ ಬೆಳಕನ್ನು ಕಳುಹಿಸುವಾಗ ಋಷಿಗಳ ಸಂಪರ್ಕವನ್ನೂ ಕೋರುತ್ತೇನೆ. ನಾನು ನಿಜವಾಗಲೂ ದೇವರ ಪ್ರೀತಿಯ ಹಾಗೂ ದಿವ್ಯಶಕ್ತಿಯ ವಾಹಕವಾಗಿದ್ದೇನೆ.

ನಾನು ಬೆಳಕನ್ನು ನನ್ನ ಗುರು, ಸ್ನೇಹಿತ ಹಾಗೂ ಮಾರ್ಗದರ್ಶಕನನ್ನಾಗಿ ಮಾಡಿಕೊಂಡಿದ್ದೇನೆ. ನನ್ನ ಜೀವನದ ಎಲ್ಲಾ ಹಂತದಲ್ಲೂ ಬೆಳಕು ಮಾರ್ಗದರ್ಶಿಸುತ್ತದೆ.

– ಲ್ಯೂಸಿಂಡಾ ಬಾಕ್

ನನಗೆ ಬೆಳಕು ಕಾಣುವುದಿಲ್ಲ. ಆದರೆ ಬೆಳಕನ್ನು ಚಾನಲ್ ಮಾಡುವಾಗ ನನ್ನ ಹತ್ತೂ ಕೈಬೆರಳುಗಳು ಹಾಗೂ ಹತ್ತೂ ಕಾಲ್ಬೆರಳುಗಳು ಕಂಪನ ಹರಡುವುದು ಗೊತ್ತಾಗುತ್ತದೆ. ಆಗಿಂದಾಗ್ಗೆ ಬೆಳಕಿನ ಈ ವೈಶಿಷ್ಟ್ಯದ ಅನುಭವವಾಗುತ್ತದೆ.

– ವಿರಕ್ತಿ ಸಾಖರೆ

ನನ್ನ ಕನಸಿನಲ್ಲಿ ಶ್ರೀ ಜಯಂತ್ ದೇಶಪಾಂಡೆ ಹಾಗೂ ಕೆಲವು ಸಾಧಕರು ನನ್ನನ್ನು ಎಲ್ಲಿಗೋ ಕರೆದೊಯ್ದರು. ಅದರ ಅರ್ಥವೇನೆಂದು ನನಗೆ ತಿಳಿಯಲಿಲ್ಲ. ನನ್ನ ಮುಂದಿದ್ದ ಜನರೆಲ್ಲ ಬೆಳಕಿನಿಂದ ತುಂಬಿದ್ದರು.

– ವಿಜಯಕುಮಾರ್ ಸಾಖರೆ

ಧ್ಯಾನವು ನನ್ನಲ್ಲಿ ಕೆಲವು ಸಾಧ್ಯತೆಗಳನ್ನು ತೆರೆಯುವುದರ ಮೂಲಕ, ಕೆಲವು ತಿಂಗಳುಗಳಿಂದ ಉತ್ತಮವಾದ ಅನುಭವವನ್ನು ಕೊಟ್ಟಿದೆ. ನನಗೆ ಈ ಧ್ಯಾನವನ್ನು ನಾನೇ ಆರಿಸಿಕೊಂಡಿದ್ದೋ ಅಥವ ಧ್ಯಾನವೇ ನನ್ನನ್ನು ಆರಿಸಿಕೊಂಡಿತೋ ಎಂಬ ಸಂದೇಹ. ಆದರೂ ಇದು ಜೀವನವನ್ನೆ ಬದಲಿಸುವ ಅನುಭವ.

– ಲಕ್ಷ್ಮಿ ಭಟ್

ಆತ್ಮದ ಮಟ್ಟದಲ್ಲಿ ನಾನು ಅತ್ಯಂತ ಶಕ್ತಿಶಾಲಿಯೆಂದು ಭಾವಿಸುತ್ತಿರುವುದರಿಂದ ಜೀವನ ಬದಲಾಗಿದೆ; ನಿಷ್ಕ್ರಿಯ, ನಿಶ್ಶಕ್ತ ಬಲಿಪಶುವೆಂಬ ಭಾವನೆ ಹೋಗಿದೆ. ನಾನು ಯಾವಾಗಲೂ ಋಷಿಗಳೊಂದಿಗೆ ಸಂಪರ್ಕದಲ್ಲಿರುವುದರಿಂದ ನನ್ನೆಲ್ಲ ಯೋಚನೆಗಳನ್ನೂ ಪ್ರತಿ ಸಂದರ್ಭದಲ್ಲೂ ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾಗಿದೆ. ಸಾಧನೆಯಲ್ಲಿ ಸ್ಥಿರವಾಗಿ ನಿಂತಿರುವುದರಿಂದ, ಪ್ರಮುಖವಾಗಿ ನನ್ನ ಜೀವನ ಸಕಾರಾತ್ಮಕಗೊಂಡಿದೆ. ಈಗ ಶಾಂತತೆ ಎಂಬ ಒಂದು ಹಂತವನ್ನು ಮುಟ್ಟಿದ್ದೇನೆ, ಸಾಧನೆಯಲ್ಲಿಇನ್ನೂ ಹೆಚ್ಚಿನ ಆಳಕ್ಕೆ ಇಳಿಯುವುದನ್ನು ಮತ್ತು ನನಗೆ ಮತ್ತು ನನ್ನ ಸಹೋದರಿಗೆ ಬಹಳ ದಿನಗಳಿಂದ ಕಾಯುತ್ತಿರುವ ಒಳ್ಳೆಯ ದಿನಗಳನ್ನು ಎದುರುನೋಡುತ್ತಿದ್ದೇನೆ.

– ಗೀತಾ ಜೋಶಿ

ಯಕ್ಷಗಾನದ ಪಾತ್ರ ಮಾಡುವುದಕ್ಕಾಗಿ ವೇದಿಕೆಗೆ ಹೋಗುವ ಮೊದಲು ಬಹಳ ನಿಶ್ಶಕ್ತನಾಗಿದ್ದೆ. ತಕ್ಷಣವೇ ಬೆಳಕನ್ನು ಪ್ರಾರ್ಥಿಸಿದೆ ಮತ್ತು ಬೆಳಕನ್ನು ನನ್ನೊಳಗೆ ತುಂಬಿಕೊಂಡೆ. ಸುಸ್ತು ಮಾಯವಾಗಿ ನನ್ನ ಪಾತ್ರವನ್ನು ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾಯಿತು. ನನ್ನ ಕೃತಜ್ಞತೆಯನ್ನು ದೇವರು ಹಾಗೂ ಗುರುಜಿಯವರಿಗೆ ಅರ್ಪಿಸುತ್ತೇನೆ.

– ಪ್ರಕಾಶ್ ಉಲ್ಲೂರ

ಏನಾಗುತ್ತಿರುವುದೋ ಅದನ್ನೆಲ್ಲಾ ಶರಣಾಗತಿಯ ಭಾವದಿಂದ ನೋಡುವುದರಿಂದ, ಎಲ್ಲವೂ ಹಗುರವಾಗಿ ತಿಳಿಯಾಗುತ್ತಿದೆ. ಧ್ಯಾನದಲ್ಲಿ ಆತ್ಮಾನಂದದ ಸ್ಥಿತಿಯಲ್ಲಿರುತ್ತೇನೆ, ಅದು ಮೊದಲಿಗಿಂತ ಬಹಳ ಕಾಲ ಉಳಿಯುತ್ತದೆ.

– ಜಸ್‌ಪ್ರೀತ್ ಭಾಟಿಯ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ